(viii) **ಅರಣ್ಯ (ಸಂರಕ್ಷಣೆ) ಕಾಯ್ದೆ 1980** ಅರಣ್ಯ (ಸಂರಕ್ಷಣೆ) ಕಾಯ್ದೆ 1980 ರ ಕಲಂ 2 ರ ಆಡಿಯಲ್ಲಿ ನೀಡಿರುವ ವಿವರಣೆಯಂತೆ ಯಾವುದೇ ಅರಣ್ಯ ಪ್ರದೇಶವನ್ನು ಅಥವಾ ಅದರ ಭಾಗವನ್ನು ರಬ್ಬರ್/ಟೀ/ಕಾಫಿ ಇತರೆ ಸಾಗುವಳಿಗೆ ಒಡೆದು ಹಾಕುವುದಾಗಲಿ ಅಥವಾ ತೆರವುಗೊಲಿಸುವುದಾಗಲಿ ಮಾಡಿದಲ್ಲಿ ಅದು "ಅರಣ್ಯೇತರ ಉದ್ದೇಶ" ಎಂದಾಗುತ್ತದೆ. ರಬ್ಬರ್ ಸಾಗುವಳಿಗೆ ಗುತ್ತಿಗೆ ನೀಡಿರುವ ಭೂಮಿಗಳು ಕಾನೂನಿನ್ವಯ ಘೋಷಿಸಿದ ಮೀಸಲು ಅರಣ್ಯ/ಪೈಸಾರಿ ಅರಣ್ಯಗಳ ಭಾಗಗಳಾಗಿರುತ್ತವೆ. ಭಾರತದ ಸರ್ವೋಚ್ಚ ನ್ಯಾಯಾಲಯವು ರೂರಲ್ ಲಿಟಿಗೇಷನ್ ಅಂಡ್ ಎಂಟೈಟಲ್‌ಮೆಂಟ್ ಕೇಂದ್ರ ಡೆಹರಾಡೂನ್ ಮತ್ತು ಇತರರು ವಿರುದ್ದ ಉತ್ತರ ಪ್ರದೇಶ ರಾಜ್ಯ ಮತ್ತು ಇತರರು (ಎಐಆರ್.1989 ಎಸ್‌ಸಿ 2187 ಪುಟ 2199 ರಲ್ಲಿ ಪ್ಯಾರಾ 31) ಪ್ರಕರಣಕ್ಕೆ ನೀಡಿರುವ ತೀರ್ಪಿನಲ್ಲಿ ಈ ರೀತಿ ತಿಳಿಸಿದೆ. "ಅರಣ್ಯ"ಎನ್ನುವುದು ಮೊದಲಿಗೆ ರಾಜ್ಯದ ವಿಷಯವಾಗಿದ್ದು ಏಳನೇ ಅನುಸೂಚಿಯ II ನೇ ಪಟ್ಟಿಯಲ್ಲಿ 19 ನೇ ಸಂಖ್ಯೆಯಲ್ಲಿ ನಮೂದಿನಿಂದ ಸೇರ್ಪಡೆಯಾಗಿತ್ತು. 1976 ರಲ್ಲಿ ಮಾಡಲಾದ 42 ನೇ ತಿದ್ದುಪಡಿಯಲ್ಲಿ ಈ ನಮೂದನ್ನು ರದ್ದುಪಡಿಸಿ concurrent ಪಟ್ಟಿಯಲ್ಲಿ 17–ಎ ಸಂಖ್ಯೆಯ ನಮೂದಿನಲ್ಲಿ ಸೇರ್ಪಡೆ ಮಾಡಲಾಯಿತು. ಅರಣ್ಯಗಳು ರಾಷ್ಟ್ರೀಯ ಪ್ರಾಮುಖ್ಯತೆಯನ್ನು ಪಡೆದಿವೆಯೆಂದು ಮತ್ತು ಆ ವಿಷಯವನ್ನು ವ್ಯವಹರಿಸಲು ಅದನ್ನು ಏಕಾಭಿಪ್ರಾಯದ ಪಟ್ಟಿಯಲ್ಲಿ ಇರಿಸಬೇಕೆಂದು ಕೇಂದ್ರ ಸರ್ಕಾರಕ್ಕೆ ಮನವರಿಕೆಯಾದ ನಂತರ ರಾಜ್ಯ ಪಟ್ಟಿಯಿಂದ concurrent ಪಟ್ಟಿಗೆ ಅದನ್ನು ಬದಲಾವಣೆ ಮಾಡಲಾಯಿತು. ಸಂವಿಧಾನದ ಭಾಗ IV-A ರಲ್ಲಿನ ಕಲಂ 48–A ತರಲಾದ ಇದೇ ರೀತಿಯ ತಿದ್ದುಪಡಿಯು ಈ ಪ್ರಕಾರ ಪ್ರತಿಪಾದಿಸುತ್ತದೆ. " ರಾಜ್ಯವು ಪರಿಸರ ಸಂರಕ್ಷಣೆ ಮತ್ತು ಅಭಿವೃದ್ಧಿ ಹಾಗೂ ಅರಣ್ಯಗಳ ಮತ್ತು ವನ್ಯ ಜೀವಿಗಳ ಹಿತರಕ್ಷಣೆಗೆ ಪ್ರಯತ್ನ ಮಾಡಬೇಕು". ಇದೇ ತಿದ್ದುಪಡಿಯಲ್ಲಿ ಸಂವಿಧಾನದ IV-A ಪರಿಶ್ಚೇಧ 51–A ರಲ್ಲಿ ಮಾಡಲಾದ ಸೇರ್ಪಡೆಯಲ್ಲಿ ಕೆಲವು ಮೂಲಭೂತ ಕರ್ತವ್ಯಗಳು ಪ್ರತಿಪಾದಿಸುತ್ತದೆ ಮತ್ತು ವಾಕ್ಯ (ಜಿ) ಈ ಪ್ರಕಾರ ಮುಂದುವರಿಯುತ್ತದೆ. "(ಜಿ) ಅರಣ್ಯಗಳು, ಸರೋವರಗಳು, ನದಿಗಳು ಮತ್ತು ವನ್ಯ ಜೀವಿಗಳು ಸೇರಿದಂತೆ

ನೈಸರ್ಗಿಕ ಪರಿಸರವನ್ನು ರಕ್ಷಿಸುವುದು ಮತ್ತು ಅಭಿವೃದ್ಧಿಪಡಿಸುವುದು ಮತ್ತು ಜೀವವಿರುವ ಎಲ್ಲಾ ಪ್ರಾಣಿಗಳ ಬಗ್ಗೆ ದಯೆತೋರುವುದು ಭಾರತದ ಪ್ರತಿ ಪ್ರಜೆಯ ಕರ್ತವ್ಯವಾಗಿರುತ್ತದೆ. "ಅರಣ್ಯ" ವಿಷಯವು ಈಗ ಸಂವಿಧಾನದ concurrent ಪಟ್ಟಿಯಲ್ಲಿ ಇರುತ್ತದೆ. ಆದ್ದರಿಂದ ಅರಣ್ಯಗಳ ಬಗ್ಗೆ ಕೇಂದ್ರದ ಕಾಯ್ದೆಗಳು ರಾಜ್ಯದ ಕಾನೂನುಗಳಿಗಿಂತ ಪ್ರಬಲವಾಗಿರುತ್ತವೆ. ರಬ್ಬರ್ ಸಾಗುವಳಿಗೆ ಗುತ್ತಿಗೆ ನೀಡಿರುವ ಪ್ರದೇಶ ಅರಣ್ಯ ಪ್ರದೇಶವಾಗಿರುತ್ತದೆ. ಅರಣ್ಯ (ಸಂರಕ್ಷಣೆ) ಕಾಯ್ದೆ 1980 ರ ಕಲಂ 2 ರಲ್ಲಿ ನೀಡಿರುವ ವಿವರಣೆಯಂತೆ ರಬ್ಬರ್ ಸಾಗುವಳಿಯು ಒಂದು ಅರಣ್ಯೇತರ ಚಟುವಟಿಕೆಯಾಗಿರುತ್ತದೆ. ಭಾರತದ ಸರ್ವೋಚ್ಚ ನ್ಯಾಯಾಲಯವು ಟಿ.ಎನ್. ಗೋದಾವರ್ಮನ್ ತಿರುಮಲ್‌ಪಾಡ್ ವಿರುದ್ಧ ಭಾರತದ ಒಕ್ಕೂಟ ಮತ್ತು ಇತರರು (ಎಐಆರ್ 1997 ಎಸ್‌ಸಿ 1228 ಪುಟ 1230 ರಲ್ಲಿ) ಪ್ರಕರಣಕ್ಕೆ 12 ಡಿಸೆಂಬರ್ 1996 ರಲ್ಲಿ ನೀಡಿದ ಆದೇಶದಲ್ಲಿನ ಪ್ಯಾರಾ 5 ರಲ್ಲಿ ಈ ರೀತಿ ತಿಳಿಸಿದೆ. 1. ಕಾಯ್ದೆಯ ಅಡಿಯಲ್ಲಿ "ಅರಣ್ಯ" ಎಂಬ ಪದಕ್ಕೆ ನೀಡಿರುವ ಅರ್ಥದ ಅನ್ವಯ "ಅರಣ್ಯ" ದಲ್ಲಿ ಯಾವುದೇ ಅರಣ್ಯೇತರ ಚಟುವಟಿಕೆಗೆ ಕೇಂದ್ರ ಸರ್ಕಾರದ ಪೂರ್ವಾನುಮತಿ ಅವಶ್ಯವೆಂಬುದು ಸ್ಪಷ್ಟವಾಗುತ್ತದೆ. ಕಾಯ್ದೆಯ ಕಲಂ 2 ರ ಅನ್ವಯ ದೇಶಾದ್ಯಂತ ಯಾವುದೇ ರಾಜ್ಯಗಳಲ್ಲಿನ ಕೇಂದ್ರ ಸರ್ಕಾರದ ಪೂರ್ವಾನುಮತಿ ಇಲ್ಲದೇ ನಡೆಯುತ್ತಿರುವ ಚಟುವಟಿಕೆಗಳು ಕೂಡಲೇ ತತ್‌ಕ್ಷಣದಿಂದ ರದ್ದಾಗಲೇಬೇಕು. "ಎಲ್ಲಾ ರಾಜ್ಯ ಸರ್ಕಾರಗಳೂ ಅಂತಹ ಎಲ್ಲಾ ಚಟುವಟಿಕೆಗಳನ್ನು ತತ್‌ಕ್ಷಣದಿಂದ ರದ್ದುಮಾಡಲಾಗಿದೆ ಎಂಬುದರ ಬಗ್ಗೆ ಖಚಿತಪಡಿಸಿಕೊಳ್ಳಬೇಕು." ಮುಂದುವರೆದು ಸದರಿ ಆದೇಶದಲ್ಲಿ (ಪುಟ 1230) ಈ ರೀತಿ ನಿರ್ದೇಶಿಸುತ್ತದೆ.. "ಕೇಂದ್ರ ಸರ್ಕಾರವಾಗಲೀ, ರಾಜ್ಯ ಸರ್ಕಾರವಾಗಲೀ, ಉಚ್ಚ ನ್ಯಾಯಲಯವನ್ನು ಒಳಗೊಂಡಂತೆ ಯಾವುದೇ ನ್ಯಾಯಾಲಯ ಅಥವಾ ಟ್ರಿಬುನಲ್ಲ ಆಗಲೀ, ಯಾವುದೇ ಪ್ರಾಧಿಕಾರವಾಗಲೀ ಈ ಆದೇಶಪಾಲನೆ ಮಾಡಬೇಕಾಗುತ್ತದೆ" ಮುಂದುವರೆದು ಭಾರತದ ಸರ್ವೋಚ್ಚ ನ್ಯಾಯಾಲಯವು ಟಿ. ಎನ್. ಗೋದಾವರ್ಮನ್ ತಿರುಮಲ್ಪಾಡ್ ವಿರುದ್ಧ ಭಾರತದ ಒಕ್ಕೂಟ ಮತ್ತು ಇತರರು ಪ್ರಕರಣಕ್ಕೆ 4 ಮಾರ್ಚ್ 1997 ರಲ್ಲಿ ನೀಡಿರುವ ಆದೇಶದಲ್ಲಿ ಈ ಕೆಳಕಂಡಂತೆ ತಿಳಿಸಿದೆ. "ಈ ವಿಷಯಕ್ಕೆ ಸಂಬಂಧಿಸಿದಂತೆ ಈ ನ್ಯಾಯಾಲಯವು ನೀಡಿರುವ ಆದೇಶಗಳು ಮತ್ತು ದಿನಾಂಕ 12–12–1996 ರಲ್ಲಿ ಹೊರಡಿಸಿರುವ ಆದೇಶ ಒಳಗೊಂಡಂತೆ ಎಲ್ಲಾ ಆದೇಶಗಳನ್ನು ಯಾವುದೇ ನ್ಯಾಯಾಲಯ ಉಚ್ಚ ನ್ಯಾಯಾಲಯ ಸೇರಿದಂತೆ ಯಾವುದೇ ನ್ಯಾಯಪೀಠ ಈ ಆದೇಶಕ್ಕೆ ವಿರುದ್ಧವಾಗಿ ಆದೇಶ ಮತ್ತು ನಿರ್ದೇಶನಗಳನ್ನು ನೀಡಿದರೂ ಅದನ್ನು ಗಮನಿಸದೇ ಈ ನ್ಯಾಯಾಲಯದ ಆದೇಶವನ್ನೇ ಕೇಂದ್ರ ಸರ್ಕಾರಗಳು ಮತ್ತು ರಾಜ್ಯ ಸರ್ಕಾರಗಳು ಪಾಲಿಸಬೇಕೆನ್ನುವುದನ್ನು ಸ್ಪಷ್ಟಪಡಿಸಿದೆ. ದಿನಾಂಕ 12.12.1996 ರ ಆದೇಶ ಮತ್ತು ಪ್ರಸ್ತುತ ಆದೇಶ ಇವುಗಳನ್ನು ಕಟ್ಟು ನಿಟ್ಟಾಗಿ ಪಾಲಿಸಲು ರಿಜಿಸ್ಟ್ರಾರ್ ಜನರಲ್ ಇವರು ಎಲ್ಲಾ ಉಚ್ಚ ನ್ಯಾಯಾಲಯಗಳು ರಿಜಿಸ್ಟ್ರಾರ್‌ಗಳಿಗೆ ಕಳುಹಿಸುವಂತೆ ನಿರ್ದೇಶಿಸಿದೆ.

(ix) **ಸರ್ಕಾರದ ಕಾರ್ಯನೀತಿ:** ಭಾರತ ಸರ್ಕಾರವು ರಾಷ್ಟ್ರೀಯ ಅರಣ್ಯ ಕಾರ್ಯ ನೀತಿಯನ್ನು 1894 ರಲ್ಲಿ ಪ್ರಕಟಿಸಿದೆ. ಸ್ವಾತಂತ್ರ್ಯದ ನಂತರ 12 ಮೇ 1952 ರಲ್ಲಿ ಮಾಡಲಾದ ನಡವಳಿ ಸಂಖ್ಯೆ: 13/52–F ರಲ್ಲಿ ಭಾರತ ಸರ್ಕಾರವು ದೇಶದಲ್ಲಿ ರಾಜ್ಯ ಅರಣ್ಯಗಳ ನಿರ್ವಹಣೆಗಾಗಿ ಸ್ಪಷ್ಟವಾಗಿ ಅರಣ್ಯ ಕಾರ್ಯ ನೀತಿಯನ್ನು ರೂಪಿಸಿದೆ. ಭಾರತ ಸರ್ಕಾರವು 7ನೇ ಡಿಸೆಂಬರ್ 1988 ರ ನಡವಳಿ ಸಂಖ್ಯೆ: 3–1/86 ಎಫ್‌ಪಿ ಅನ್ವಯ ರಾಷ್ಟ್ರೀಯ ಅರಣ್ಯ ನೀತಿಯನ್ನು ಪರಿಷ್ಕರಿಸಿದೆ. ಅದರಲ್ಲಿ "ಸಂರಕ್ಷಣೆ" ಎಂದರೆ ಕಾಪಾಡುವುದು, ನಿರ್ವಹಣೆ, ಸುಸ್ಥಿರ ಬಳಕೆ, ಪುನ: ಸ್ಥಾಪನೆ ಮತ್ತು ನೈಸರ್ಗಿಕ ಪರಿಸರವನ್ನು ಹೆಚ್ಚಿಸುವುದು ಸಹಾ ಒಳಗೊಂಡಿದೆಯೊಂದು ಹೇಳಲಾಗಿದೆ. ಕಾರ್ಯ ನೀತಿಯ ಮೂಲ ಉದ್ದೇಶಗಳು ಇವುಗಳನ್ನು ಒಳಗೋಂಡಿದೆ (i) ನೈಸರ್ಗಿಕ ಪರಿಸರದ ಧೃಡತೆಯನ್ನು ಕಾಪಾಡುವುದು ಮತ್ತು ಅರಣ್ಯಗಳ ಅಪಾಯಕರ ಕ್ಷೀಣಿಕೆಯಿಂದ ಜೀವಿವೈವಿಧ್ಯದ ಸಮತೋಲನದ ಮೇಲೆ ಆಗಿರುವ ದುಷ್ಪರಿಣಾಮವನ್ನು ಪುನ: ಸ್ಥಾಪಿಸುವುದು ಮತ್ತು (ii) ವಿಪುಲ ವನ್ಯ ಪ್ರಾಣಿ ಸಂಕುಲಗಳನ್ನು ಹೊಂದಿರುವ ಮತ್ತು ಗಮನಾರ್ಹ ಜೀವಿವೈವಿಧ್ಯತೆ ಮತ್ತು ದೇಶದ ಉತ್ಪನ್ನ ಮೂಲಗಳಿಗೆ ಕಾರಣವಾಗಿ ಉಳಿದಿರುವ ಸ್ವಾಭಾವಿಕ ಅರಣ್ಯಗಳನ್ನು ದೇಶದ ನೈಸರ್ಗಿಕ ಪರಂಪರೆ ದೃಷ್ಟಿಯಿಂದ ಕಾಪಾಡುವುದು. ಕಾರ್ಯ ನೀತಿಯು ಅರಣ್ಯ ಕಾರ್ಯ ನಿರ್ವಹಣೆ ಅವಶ್ಯವಿರುವುದನ್ನು ಘೋಷಿಸುತ್ತದೆ. ಅವು (i) ಈಗ ಇರುವ ಅರಣ್ಯ ಮತ್ತು ಅರಣ್ಯ ಭೂಮಿಯನ್ನು ಸಂಪೂರ್ಣವಾಗಿ ಕಾಪಾಡಿ ಅವುಗಳ ಉತ್ಪನ್ನವನ್ನು ಅಭಿವೃದ್ಧಿಪಡಿಸುವುದು (ii) ಅರಣ್ಯ ಮತ್ತು ಸಸ್ಯ ಕವಚವನ್ನು ಬೆಟ್ಟಗಳ ಇಳಿಜಾರು, ನದಿಗಳ ಅಚ್ಚುಕಟ್ಟು ಪ್ರದೇಶ, ಸರೋವರ ಮತ್ತು ಜಲಾಶಯಗಳು, ಸಮುದ್ರ ದಡಗಳು, ಶುಷ್ಕ ಮತ್ತು ಅರೆ ಶುಷ್ಕ ಮತ್ತು ಮರುಭೂಮಿ ಪ್ರದೇಶಗಳು ಮತ್ತು (iii) ಜೀವಿವೈವಿದ್ಯತೆಯ ಸಂರಕ್ಷಣೆಗಾಗಿರಾಷ್ಟ್ರೀಯ ಉದ್ಯಾನವನಗಳು ಅಭಯಾರಣ್ಯಗಳು, ಜೈವಿಕ ಮಂಡಲ ಜಾಲಗಳು ಮತ್ತು ಇತರೆ ರಕ್ಷಿತ ಪ್ರದೇಶಗಳನ್ನು ಸಾಕಷ್ಟು ಪ್ರಮಾಣದಲ್ಲಿ ಬಲಪಡಿಸುವುದು ಮತ್ತು ವಿಸ್ತರಿಸುವುದು ಒಳಗೊಂಡಿದೆ. ಕಾರ್ಯ ನೀತಿಯ ಕೌಶಲ್ಯಗಳು ಇವನ್ನು ಒಳಗೊಂಡಿದೆಯೆಂದು ನಿರ್ದೇಶಿಸುತ್ತದೆ. (i) ದೇಶದಲ್ಲಿನ ಭೂಪ್ರದೇಶದ ಕನಿಷ್ಟ ಮೂರನೇ ಒಂದು ಭಾಗದಷ್ಟು ಅರಣ್ಯ ಕವಚ ಅಥವಾ ವೃಕ್ಷ ಕವಚ ಇರಬೇಕೆಂಬ ರಾಷ್ಟ್ರೀಯ ಗುರಿ ಇರಬೇಕು. ಬೆಟ್ಟಗಳು ಮತ್ತು ಪರ್ವತ ಶ್ರೇಣಿಗಳ ಪ್ರದೇಶದಲ್ಲಿ ಮೂರನೇ ಎರಡು ಭಾಗದಷ್ಟು ಪ್ರದೇಶವನ್ನು ಅಂತಹ ಕವಚದಿಂದ ನಿರ್ವಹಿಸಬೇಕೆಂಬ ಗುರಿಯನ್ನು ಅಲ್ಲಿನ ಮಣ್ಣು ಸವೆತ, ಭೂ ಕ್ಷೀಣತೆ ತಡೆಯಲು ಮತ್ತು ನಾಜೂಕಾದ ಪರಿಸರ ಸಂರಕ್ಷಣಾ ದೃಷ್ಟಿಯನ್ನು ಹೊಂದಬೇಕು (ii) ಅರಣ್ಯಗಳು, ಭಾರಿ ಇಳಿಜಾರಿನ ಕೊಳ್ಳಗಳು, ನದಿಗಳ ಅಚ್ಚುಕಟ್ಟು ಪ್ರದೇಶ ಸರೋವರಗಳು, ಜಲಾಶಯಗಳು, ಭೂಗರ್ಭ ಶಾಸ್ತ್ರದಂತೆ ಧೃಡತೆಯಿಲ್ಲದ ಪ್ರದೇಶಗಳು ಮತ್ತು ಇತರೆ ಜೀವಿವೈವಿಧ್ಯ ಸೂಕ್ಷ್ಮ ಪ್ರದೇಶಗಳ ನಡುವೆ ಬರುವಂತ ಯೋಜನೆ ಮತ್ತು ಪ್ರಾಜೆಕ್ಟಗಳನ್ನು ನಿರ್ಬಂಧಿಸಬೇಕು. ಉಷ್ಣ ಪ್ರದೇಶ, ಮಳೆ/ತೇವಾಂಶ ಅರಣ್ಯಗಳನ್ನು ವಿಶೇಷವಾಗಿ ಅರಣಾಚಲ ಪ್ರದೇಶ, ಕೇರಳ, ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳ ಅರಣ್ಯಗಳನ್ನು ರಕ್ಷಿಸಬೇಕು (iii) ಯಾವುದೇ ಅರಣ್ಯದಲ್ಲಿ ಸರ್ಕಾರವು ಅಂಗೀಕರಿಸಿದ ನಿರ್ವಹಣಾ ಯೋಜನೆಯಿಲ್ಲದೆ ಕಾಮಗಾರಿಯನ್ನು ಕೈಗೊಳ್ಳಬಾರದು. ಸರ್ಕಾರದ ಅಂಗೀಕೃತ ಯೋಜನೆಯನ್ನು ರಾಷ್ಟ್ರೀಯ ಅರಣ್ಯ ನೀತಿಯನ್ನು ಗಮನದಲ್ಲಿಟ್ಟುಕೊಂಡು ಸಿದ್ದಪಡಿಸಿದ ನಿಗದಿತ ನಮೂನೆಯಲ್ಲಿ ಮಂಜೂರು ಮಾಡಬೇಕು. (iv) ಅರಣ್ಯ ಭೂಮಿ ಅಥವಾ ಮರಗಳು ಇರುವ ಭೂಮಿಯನ್ನು ವಿವಧ ಕಾರ್ಯ ಕ್ರಮಗಳ ಮತ್ತು ಯೋಜನೆಗಳಿಗೆ ಮಾತ್ರವೇ ಲಭ್ಯವಿರುವ ಸಂಪನ್ಮೂಲವೆಂದು ಪರಿಗಣಿಸಿದೆ. ಅದನ್ನು ಪೂರಾ ಸಮುದಾಯಕ್ಕೆ ಸುಸ್ಥಿರವಾದ ಸೌಲಭ್ಯಗಳನ್ನು ಒದಗಿಸುವ ರಾಷ್ಟ್ರೀಯ ಆಸ್ತಿಯೆಂದು ಅವನ್ನು ಯೋಗ್ಯವಾದ ರೀತಿಯಲ್ಲಿ ಸಂರಕ್ಷಿಸಬೇಕು (vi) ಅರಣ್ಯ ನಿರ್ವಹಣೆಯು ವನ್ಯ ಜೀವಿ ಸಂರಕ್ಷಣೆಯ ಅವಶ್ಯಕತೆಗಳ ಬಗ್ಗೆ ವಿಶೇಷ ಜಾಗರೂಕತೆ ವಹಿಸಬೇಕು ಮತ್ತು

ಅರಣ್ಯ ನಿರ್ವಹಣಾ ಯೋಜನೆಗಳು ಈ ಉದ್ದೇಶಕ್ಕೆ ವಿಧಿ ವಿಧಾನಗಳನ್ನು ಒಳಗೊಂಡಿರಬೇಕು. ರಕ್ಷಿತ ಪ್ರದೇಶಗಳನ್ನು ಸೇರುವಂತೆ ಪ್ರಾಣಿಗಳನ್ನು ಕಾಪಾಡುವ ಗುರಿ ಮಾಡಲು ಅವಕಾಶ ಕಲ್ಪಿಸುವುದು ಅತ್ಯವಶ್ಯ. ಇದರಿಂದಾಗಿ ಸಂತಾನ ಉತ್ಪತ್ತಿ ಅನುಕ್ರಮವನ್ನು ನಿರ್ವಹಣೆಯಾಗಿ ಕೃತಕವಾಗಿ ವನ್ಯಜೀವಿ ವಲಸೆಯಿಂದ ಬೇರ್ಪಟ್ಟ ಉಪ ವಿಭಾಗಗಳ ನಡುವೆ ಸಂಪರ್ಕ ಏರ್ಪಡಿಸಲು ಸಹಕಾರಿಯಾಗುತ್ತದೆ. (vii) ಸ್ವಾಭಾವಿಕ ಅರಣ್ಯಗಳು ಸಂತಾನೋತ್ಪತ್ತಿಯ ನಿಧಿಯಾಗಿ ಸಂಪನ್ಮೂಲವಾಗಿ ಜೀವಿವೈವಿಧ್ಯತೆ ಸಮತೋಲನ ನಿರ್ವಹಣೆಗೆ ಸಹಕರಿಸುತ್ತದೆ. ಆದ್ದರಿಂದ ಅಂತಹ ಅರಣ್ಯಗಳನ್ನು ಕೈಗಾರಿಕೆಗಳಿಗೆ ನೆಡುತೋಪು ಬೆಳೆಸಲು ಅಥವಾ ಇನ್ನಿತರ ಯಾವುದೇ ಚಟುವಟಿಕೆಗಳಿಗೆ ದೊರಕುವಂತೆ ಮಾಡಬಾರದು. ಭಾರತದ ಸರ್ವೋಚ್ಚ ನ್ಯಾಯಾಲಯವು ರಿ.ಅ.ಸಂಖ್ಯೆ 202/1995 ರಲ್ಲಿನ ಲಾಫಾರ್ಜ್ ಉಮಿಯಮ್ ಮೈನಿಂಗ್ ಪ್ರೈ.ಲಿ. ಪ್ರಕರಣದಲ್ಲಿ (ಎಐಆರ್ 2011 ಎಸ್‌ಸಿ 2781) ನೀಡಿದ ತೀರ್ಪಿನಲ್ಲಿ ಈ ರೀತಿ ತಿಳಿಸಿದೆ. " ಪರಿಸರ ಮತ್ತು ಸುಸ್ಥಿರ ಅಭಿವೃದ್ಧಿ " ಎನ್ನುವ ಪದಗಳು ವಿವಿಧ ಅರ್ಥಗಳನ್ನು ಹೊಂದಿವೆ. ಕೆಲವು ಸಂದರ್ಭಗಳಲ್ಲಿ ಇವುಗಳಿಗೆ ಮಾಹಿತಿಗಳು ಲಭ್ಯವಿರುವುದಿಲ್ಲ. ಪರಿಸರದ ಬಗ್ಗೆ ಜಾಗೃತಿಯು ಬಂದು ಮುಂದುವರೆಯುತ್ತಿರುವ ಪ್ರಕ್ರಿಯೆಯಾಗಿರುತ್ತದೆ. ದೂರದೃಷ್ಟಿಯ ತತ್ವಗಳನ್ನು ತಿಳಿಸುವ 1988 ರ ರಾಷ್ಟ್ರೀಯ ಅರಣ್ಯ ನೀತಿಯ ಅನುಸಾರವೇ ಅರಣ್ಯ (ಸಂರಕ್ಷಣೆ) ಕಾಯ್ದೆ 1980 ರ ಕಲಂ 2 ರ ಅಡಿಯಲ್ಲಿ ಅನುಮತಿ ಮಂಜೂರಾತಿಯನ್ನು ನೀಡಲೇ ಬೇಕೆಂದು ಘೋಷಿಸಿ ಹೇಳುವ ಕಾಲವು ಈಗ ನ್ಯಾಯಲಯಕ್ಕೆ ಬಂದಿರುತ್ತದೆ. ಕಾರಣ ಇದರಲ್ಲಿ ಪರಿಸರ (ಸಂರಕ್ಷಣೆ) ಕಾಯ್ದೆ 1986 ರಲ್ಲಿ ತಿಳಿಸಿರುವ ಜೀವಿವೈವಿಧ್ಯ ರಕ್ಷಣೆ ಮತ್ತು ಅಭಿವೃದ್ಧಿಗೆ ಮಾರ್ಗವನ್ನು ಇದು ಪ್ರತಿಪಾದಿಸುತ್ತದೆ. ರಾಷ್ಟ್ರೀಯ ಅರಣ್ಯ ನೀತಿ 1988 ರಲ್ಲಿ ತಿಳಿಸಿರುವ ಸಿದ್ಧಾಂತಗಳು/ಮಾರ್ಗ ಸೂಚಿಗಳನ್ನು ಪರಿಸರ (ಸಂರಕ್ಷಣೆ) ಕಾಯ್ದೆ 1986 ರ ಭಾಗವಾಗಿ ಓದಬೇಕು ಮತ್ತು ಅರಣ್ಯ (ಸಂರಕ್ಷಣೆ) ಕಾಯ್ದೆ 1980 ನ್ನು ಒಟ್ಟುಗೂಡಿಸಿ ಓದಬೇಕು. ಈ ದಿನದವರೆಗೆ ಮೇಲೆ ಹೇಳಿದ ರಾಷ್ಟ್ರೀಯ ಅರಣ್ಯ ನೀತಿ 1988 ರ ಜೊತೆಗೆ ಓದಲಾದ ಅರಣ್ಯ (ಸಂರಕ್ಷಣೆ) ಕಾಯ್ದೆ 1980 ಅನ್ನು ಅನುಷ್ಠಾನಗೊಳಿಸಲು ಯಾವುದೇ ಸ್ಥಿರವಾದ ಸಂಘಟನೆ ಇಲ್ಲವಾದ ಕಾರಣ ಈ ನಿರ್ದೇಶನ ನೀಡುವುದು ಅವಶ್ಯವಾಗಿದೆ.

(ix) **ಮಂಜೂರಾದ ಕಾರ್ಯ ಯೋಜನೆ:** ಗುತ್ತಿಗೆಗೆ ನೀಡಿರುವ ಅನುಸೂಚಿತ ಪ್ರದೇಶವು ಹೆಸರಾಂತ ನದಿಗಳಾದ ನೇತ್ರಾವತಿ ಮತ್ತು ಕಾವೇರಿ ನದಿಗಳ ಕ್ಯಾಚ್‌ಮೆಂಟ್ ಪ್ರದೇಶದಲ್ಲಿ ಬರುತ್ತದೆ ಮತ್ತು ಇದು ಸದಾ ಹಚ್ಚ ಹಸುರಿನ ಮತ್ತು ಅರೆ ಹಚ್ಚ ಹಸುರಿನ ವಿವಿಧ ಅರಣ್ಯವಾಗಿದೆ. ರಬ್ಬರ್ ಸಾಗುವಳಿಗೆ ಗುತ್ತಿಗೆ ನೀಡಿರುವ ಅರಣ್ಯ ಭೂಮಿಗಳು ಸುತ್ತುವರೆದಿರುವ ಪಶ್ಚಿಮ ಘಟ್ಟಗಳನ್ನು ಒಳಗೊಂಡಂತೆ ಮಡಿಕೇರಿ ಅರಣ್ಯ ವಿಭಾಗದಲ್ಲಿ 2002 ರಿಂದ 2012 ರವರೆಗೆ ಚಾಲ್ತಿಯಲ್ಲಿರುವ "ರಕ್ಷಣಾ ಕಾರ್ಯಯೋಜನೆ ವೃತ್ತದಲ್ಲಿ ಘಾಟಿ ಅರಣ್ಯ ಪ್ರಾಮುಖ್ಯತೆಯನ್ನು ಗಮನಿಸಿ ಸೇರ್ಪಡೆ ಮಾಡಲಾಗಿದೆ. ಇದು ಭಾರತ ಸರ್ಕಾರದಿಂದ ಪತ್ರ ಸಂ: ಎಫ್(ಸಿ)ಎ/11.6/128/ಮಿಸ್/ಕೆಎಆರ್/1332, ದಿನಾಂಕ 30 ಸೆಪ್ಟೆಂಬರ್ 2002 ರಲ್ಲಿ ಅನುಮೋದನೆಗೊಂಡಿದೆ. ಕರ್ನಾಟಕ ಸರ್ಕಾರವು ಸರ್ಕಾರಿ ಆದೇಶ ಸಂ: ಎಫ್‌ಇಇ 93 ಎಫ್‌ಎಪಿ, ದಿನಾಂಕ 25 ಅಕ್ಟೋಬರ್ 2002 ರಲ್ಲಿ ಕಾರ್ಯಯೋಜನೆಗೆ ಮಂಜೂರಾತಿ ನೀಡಿದೆ. ಅಂಗೀಕೃತ ಕಾರ್ಯಯೋಜನೆ ಅನುಷ್ಠಾನವಾಗುತ್ತಿದೆ. ಇದರಲ್ಲಿ ತಿಳಿಸಲಾಗಿರುವಂತೆ ಈ ಪ್ರದೇಶದಲ್ಲಿ ಯಾವುದೇ ಸಾಗುವಳಿಗೆ ಅನುಮತಿಯನ್ನು ನದಿಗಳ ಅಚ್ಚು ಕಟ್ಟು ಪ್ರದೇಶ ರಕ್ಷಣೆಯನ್ನು ಗಮನದಲ್ಲಿಟ್ಟುಕೊಂಡು ನೀಡುತ್ತಿಲ್ಲ. ರಬ್ಬರ್ ಕಂಪನಿಗಳಿಗೆ ಗುತ್ತಿಗೆ ನೀಡಿರುವ ಅರಣ್ಯ ಪ್ರದೇಶಗಳ್ನು ಕಾರ್ಯಯೋಜನೆಯಲ್ಲಿ ವಿವರಸಲಾಗಿದೆ. ಇತರರೂ ಸೇರಿದಂತೆ ರಬ್ಬರ್ ಕಂಪೆನಿಗಳು ವಾರ್ಷಿಕ ಗೇಣಿ ಬಾಡಿಗೆ ಪಾವತಿ ಮಾಡದೇ ಗೇಣಿಯ ಷರತ್ತುಗಳನ್ನು ಉಲ್ಲಂಘಿಸಿದ್ದಾರೆಂದು ಕರ್ನಾಟಕದ ಮಹಾಲೇಖಪಾಲರು ವರದಿ ಮಾಡಿರುತ್ತಾರೆಂದೂ ಮತ್ತು ಗೇಣಿದಾರರಿಂದ ಬಾಕಿ ವಸೂಲಿ ಮಾಡಲು ಕ್ರಮ ಕೈಗೊಳ್ಳಲು ತಿಳಿಸಿರುತ್ತಾರೆಂದೂ ಹೇಳಲಾಗಿದೆ. ಕಾರ್ಯಯೋಜನೆಯ ಅಧ್ಯಾಯ 1 ರ ಕಂಡಿಕೆ 45 ಮತ್ತು 46 ರಲ್ಲಿ ಅನುಸೂಚಿತ ಭೂಮಿಗೆ ಕೆಳಕಂಡಂತೆ ನಿಯಮಗಳನ್ನು ಮಾಡಲಾಗಿದೆ.

"45.ಗೇಣಿದಾರರು ಗೇಣಿಯಲ್ಲಿನ ಷರತ್ತುಗಳಲ್ಲಿ ತಿಳಿಸಿರುವ ರೀತ್ಯಾ ಪರಿವರ್ತನಾ ಅವಧಿ, ಬದುಗಳ ಮೀಸಲಾತಿ, ಸಾಗುವಳಿಯ ವಿಧಾನ, ಮಣ್ಣು ಸಂರಕ್ಷಣೆ ಸರಹದ್ದು ನಿರ್ವಾಹಣೆ ಮುಂತಾದವನ್ನು ಪಾಲಿಸಿಲ್ಲವೆಂದು ಸಹಾ ಉಪ ಅರಣ್ಯ ಸಂರಕ್ಷಣಾಧಿಕಾರಿ, ಮಡಿಕೇರಿ ಇವರು ವರದಿ ಮಾಡಿರುತ್ತಾರೆ. ಗುತ್ತಿಗೆಯ ಮೇಲೆ ನೀಡಿರುವ ಭೂಮಿಗಳನ್ನು ಮಾರಾಟ ಮಾಡುವುದು ಸ್ಪಷ್ಟವಾಗಿ ಗೇಣಿ ಒಪ್ಪಂದದ ಉಲ್ಲಂಘನೆಯಾಗಿರುತ್ತದೆ. ಕಂಪೆನಿಗಳು ಸುತ್ತುವರೆದಿರುವ ಅರಣ್ಯ ಭೂಮಿಯನ್ನು ಒತ್ತುವರಿ ಮಾಡುವ ಸಂಭವವಿರುವುದರಿಂದ ಈ ಪ್ರದೇಶಗಳನ್ನು ಮೋಜಣಿ ಮಾಡಿ ಸರಹದ್ದನ್ನು ಸ್ಪಷ್ಟವಾಗಿ ಗುರುತಿಸುವ ಅಗತ್ಯವಿರುತ್ತದೆ."

"46.ಈ ಗೇಣಿದಾರ ಕಂಪೆನಿಗಳು ಒತ್ತುವರಿ ಮಾಡದಂತೆ ಖಚಿತಪಡಿಸಿಕೊಳ್ಳಲು ಎಲ್ಲಾ ಅವಶ್ಯ ಕ್ರಮಗಳನ್ನು ಕಟ್ಟುನಿಟ್ಟಾಗಿ ಕೈಗೊಳ್ಳಬೇಕಾಗುತ್ತದೆ. ಅವರು ಒಂದು ವೇಳೆ ಇವನ್ನು ಪಾಲಿಸಲು ವಿಫಲವಾದಲ್ಲಿ ಗುತ್ತಿಗೆಯನ್ನು ರದ್ದುಪಡಿಸಿ ಪ್ರದೇಶವನ್ನು ಸರ್ಕಾರದ ವಶಕ್ಕೆ ಹಿಂಪಡೆಯಲು ಕ್ರಮ ಜರುಗಿಸಬೇಕು."

ಕರ್ನಾಟಕ ಸರ್ಕಾರ ಮತ್ತು ಭಾರತ ಸರ್ಕಾರಗಳೆರಡೂ ರಬ್ಬರ್ ಕಂಪೆನಿಗಳು ಗುತ್ತಿಗೆ ಒಪ್ಪಂದವನ್ನು ಉಲ್ಲಂಘಿಸಿವೆ ಎಂಬುದನ್ನು ಧೃಡಪಡಿಸಿಕೊಂಡಿವೆ ಮತ್ತು ಗೇಣಿದಾರ ಕಂಪನಿಗಳ ವಿರುದ್ದ ಕ್ರಮ ಕೈಗೊಳ್ಳಲು ನಿರ್ದೇಶನ ನೀಡಿರುತ್ತವೆ. ಅಂತಿಮವಾಗಿ ಭಾರತದ ಸರ್ವೋಚ್ಚ ನ್ಯಾಯಾಲಯವು ರಿ.ಅ. (ಸಿ) ಸಂ: 202/1995 ಟಿ.ಎನ್.ಗೋದಾವರ್ಮನ್ ತಿರುಮಲ್ಪಾಡ್ ವಿರುದ್ದ ಭಾರತದ ಒಕ್ಕೂಟ ಮತ್ತು ಇತರರು(ಎಐಆರ್ 1998 ಎಸ್‌ಸಿ 769 ಪುಟ 772 ರಲ್ಲಿ) ಪ್ರಕರಣಕ್ಕೆ 15 ಜನವರಿ 1998 ರಂದು ನೀಡಿದ ಆದೇಶದ ಪ್ಯಾರಾ 23 ರಲ್ಲಿ ಈ ರೀತಿ ನಿರ್ದೇಶಿದೆ. "ಅರಣ್ಯ ಕಾಮಗಾರಿಯನ್ನು ಅನುಮೋದನೆಯಾದ ಕಾರ್ಯಯೋಜನೆಯಲ್ಲಿ ನಿಯಮಿಸಿರುವಂತೆಯೇ ಕಟ್ಟು ನಿಟ್ಟಾಗಿ ಕೈಗೊಳ್ಳಬೇಕು" ಭಾರತ ಸರ್ಕಾರದಿಂದ ಅಂಗೀಕೃತವಾಗಿರುವ ಚಾಲ್ತಿ ಕಾರ್ಯಯೋಜನೆಯಲ್ಲಿ ಗೇಣಿಯ ಅವಧಿ 99 (ತೊಂಭತ್ತೊಂಭತ್ತು) ವರ್ಷಗಳು.

(xi) ನಾಜೂಕಾದ ಪಶ್ಚಿಮ ಘಟ್ಟಗಳು: ಗುತ್ತಿಗೆ ನೀಡಿರುವ ಪ್ರದೇಶವು ಪಶ್ಚಿಮ ಘಟ್ಟಗಳಾಗಿದ್ದು ಅವು ಉಷ್ಣ ವಲಯದ ತೇವಾಂಶ ಕೂಡಿ ಹಚ್ಚ ಹಸುರಿನ ಕಾಡುಗಳಾಗಿದ್ದು ಪ್ರಪಂಚದ ಜೀವಿವೈವಿಧ್ಯತೆಯ 25 ಬೃಹತ್ ಸ್ಥಾನಗಳಲ್ಲಿ ಒಂದಾಗಿದೆ. ಇಲ್ಲಿನ ಅರಣ್ಯಗಳು ಬಹಳ ನಾಜೂಕಾಗಿದ್ದು ಉಳಿಯುವಿಕೆ ಪದ್ದತಿಯಲ್ಲಿ ಸಂಕೀರ್ಣತೆಯಿಂದ ಕೂಡಿದೆ. ಈ ಅಪೂರ್ವ ಅರಣ್ಯಗಳು ತಮ್ಮ ಮೇಲೆ ತಾವೇ ನಿಂತಿವೆ. ಒಂದೊಮ್ಮೆ ಅರಣ್ಯಗಳನ್ನು ತೆರವುಗೊಳಿಸಿದಲ್ಲಿ ಕಡಿಮೆಗುಣ ಮಟ್ಟದ ಮಣ್ಣಿನಿಂದಾಗಿ ಶತಮಾನಗಳಿಂದಲೂ ದಟ್ಟ ಅರಣ್ಯಗಳನ್ನು ಪುನ: ಸ್ಥಾಪಿಸುವುದು

ಕಷ್ಟಸಾಧ್ಯ. ಈ ಪ್ರದೇಶದ ವಿರಳ ಸಸ್ಯ ಪ್ರಭೇಧಗಳು ಇಲ್ಲಿನ ವಾಸಸ್ಥಾನಗಳ ಬದಲಾವಣೆಯಿಂದ ಪರಿಸರ ಪದ್ಧತಿಯ ಮೇಲೆ ಆಗುವ ಪರಿಣಾಮ ಅರಣ್ಯ ಉಳಿಯುವಿಕೆ ವೃದ್ಧಿಪಡಿಸಲು ಸಂಪನ್ಮೂಲಗಳಾಗಿರುತ್ತವೆ. ಇಲ್ಲಿ ಅರಣ್ಯಗಳು ಇಲ್ಲಿ ಸದಾ ಇದ್ದವು ಮತ್ತು ಮುಂದೆಯೂ ಅರಣ್ಯಗಳು ಇಲ್ಲೇ ಉಳಿಯುತ್ತವೆ ಎನ್ನುವ ಪ್ರವಾಸಿಗಳಿಗೆ ಸಹಜವಾಗಿ ಕಾಣುವ ಪ್ರತಿಬಿಂಬವು ಅವರ ತಿಳುವಳಿಕೆ ಇಲ್ಲದ ಕಲ್ಪನೆಯಷ್ಟೆ ಆಗಿದೆ. ಪಶ್ಚಿಮ ಘಟ್ಟಗಳ ಜೀವಿವೈವಿಧ್ಯ ಗೂಡುಗಳು ಸ್ಥಾನಿಕ ಸಸ್ಯ ಪ್ರಭೇದಗಳನ್ನು ಸಂಬಂಧಿಸಿ ಗಮನಿಸಿದಾಗ ದ್ವೀಪಗಳನ್ನು ಹೋಲುತ್ತವೆ. ಇಲ್ಲಿನ ಕೆಲವು ಪ್ರಮುಖ ಸಸ್ಯ ಪ್ರಭೇದಗಳು ನಮ್ಮ ಕಾಲದ **"ಡೈನೋಸಾರ್"** ಗಳಾಗಿರುತ್ತವೆ. ಪಶ್ಚಿಮ ಘಟ್ಟದಲ್ಲಿರುವ ಸುಮಾರು 4000 ಹೂ ಬಿಡುವ ಸಸ್ಯ ಪ್ರಭೇದಗಳಲ್ಲಿ 1500 ಸಸ್ಯ ಪ್ರಭೇದಗಳು ಸ್ಥಾನಿಕವಾಗಿರುತ್ತವೆ. ಅಂತರಾಷ್ಟ್ರೀಯ ಪಕ್ಷಿ ಸಂರಕ್ಷಣಾ ಪರಿಷತ್‌ನ ಜೀವಿವೈವಿಧ್ಯ ಯೋಜನೆಯಲ್ಲಿ ಗುರುತಿಸಿರುವ ರೀತಿ ಇಲ್ಲಿ 221 ಸ್ಥಾನಿಕ ಪಕ್ಷಿ ಸಂಕುಲಗಳಿವೆ. ಈ ಪ್ರದೇಶವು ಅಳಿವಿನ ಅಂಚಿಗೆ ಬಂದಿರುವ ಸಿಂಹದ ಬಾಲ ಹೊಂದಿರುವ ಮಂಗಗಳಿಗೆ ಪ್ರಸಿದ್ಧಿಯಾಗಿದೆ. ಅವುಗಳ ಮೂಲ ಭೂತ ಕಾರ್ಯಗಳ ಜೊತೆಗೆ ಮಣ್ಣು ಸಂರಕ್ಷಣೆ, ಮುಂಗಾರಿನಲ್ಲಿ ಜಲಸಂರಕ್ಷಣೆ ಮತ್ತು ಪ್ರಾದೇಶಿಕ ಹವಾಮಾನ ಸಮತೋಲನ ಕಾಪಾಡಿಕೊಳ್ಳುವಲ್ಲಿ ಪಶ್ಚಿಮ ಘಟ್ಟಗಳು ಪ್ರಪಂಚದಲ್ಲೇ ಅತ್ಯಂತ ಮನೋಹರ ಹಚ್ಚಹಸಿರಿನ ಅರಣ್ಯ ಮಾದರಿಗಳಾಗಿವೆ. ಸ್ಥಾನಿಕ ಸಸ್ಯ ಪ್ರಭೇದಗಳಿಂದಾಗಿ ಈ ಅರಣ್ಯಗಳು ಒಂದು ಮೂಲಭೂತ ಪ್ರಾಮುಖ್ಯತೆಯ ಉತ್ಪತ್ತಿ ಮೀಸಲುಗಳೆನಿಸಿದ್ದು ಇವನ್ನು ಯಾವುದೇ ಬೆಲೆ ತೆತ್ತಾದರೂ ಸಂರಕ್ಷಿಸುವುದು ಅವಶ್ಯ. ಭಾರತದ ಸರ್ವೋಚ್ಚ ನ್ಯಾಯಾಲಯವು ಮತ್ತೊಮ್ಮೆ ರಿ..ಅ.(ಸಿ) ಸಂ:202/1995 ಟಿ.ಎನ್.ಗೋದಾವರ್ಮನ್ ತಿರುಮಲ್ಪಾಡ್ ವಿರುದ್ಧ ಭಾರತದ ಒಕ್ಕೂಟ ಮತ್ತು ಇತರರು ಪ್ರಕರಣ ಮಧ್ಯಾಂತರ ಅರ್ಜಿ ಸಂಖ್ಯೆ 670/2001 ಕ್ಕೆ ದಿನಾಂಕ 30 ಅಕ್ಟೋಬರ್ 2002 ರಲ್ಲಿ ನೀಡಿರುವ ತೀರ್ಪಿನಲ್ಲಿ (ಎಐಆರ್ 2003 ಎಸ್‌ಸಿ 724) ಈ ರೀತಿ ತಿಳಿಸಿದೆ. "ನಿಸರ್ಗ, ಪರಿಸರವನ್ನು ನಾಶಪಡಿಸುವ ಮೂಲಕ ಮಾನವನು ಮಾತೃ ಹತ್ಯೆಯನ್ನು ಮಾಡುತ್ತಿದ್ದು ಒಂದು ವಿಧದಲ್ಲಿ ಭೂಮಿ ತಾಯಿಯ ಹತ್ಯೆಯನ್ನು ಮಾಡುತ್ತಿದ್ದಾನೆ. ತಾಂತ್ರಿಕ ಕೌಶಲ್ಯ, ಕೈಗಾರಿಕೆಗಳ ಬೆಳವಣಿಗೆ, ಆರ್ಥಿಕ ಗಳಿಕೆಗಳು ನೈಸರ್ಗಿಕ ಸಂಪನ್ಮೂಲಗಳನ್ನು ಹಿಂಪಡೆಯಲಾಗದಂತೆ ಕ್ಷೀಣಿಸಲು ಕಾರಣವಾಗುತ್ತಿದೆ. ದುಷ್ಪರಿಣಾಮಗಳ ಬಗ್ಗೆ ಉದಾಸೀನ, ಕಾಳಜಿಯ ಮತ್ತು ದೂರದೃಷ್ಟಿಯ ಕೊರತೆಗಳು ಹೆಚ್ಚಿನ ಮಟ್ಟಿಗೆ ಇಂತಹ ಭಯಾನಕ ಪರಿಸ್ಥಿತಿಗೆ ಕಾರಣವಾಗಿದೆ. ಈ ಪ್ರಕರಣದಲ್ಲಿ ಖಚಿತ ಬಲಿಪಶು ಪಶ್ಚಿಮಘಟ್ಟದ ಒಂದು ಭಾಗವಾದ ಕುದುರೆಮುಖ ರಾಷ್ಟ್ರೀಯ ಉದ್ಯಾನವನದ ಸಸ್ಯ ಮತ್ತು ಪ್ರಾಣಿ ಸಂಕುಲವಾಗಿದೆ. ಈ ಪ್ರದೇಶದ ಅರಣ್ಯಗಳು ಅಂತರ್ ರಾಷ್ಟ್ರೀಯ ಮಟ್ಟದಲ್ಲಿ ಪ್ರಪಂಚಾದ್ಯಂತ ಮಾನ್ಯವಾಗಿರುವ 18 ಜೀವಿವೈವಿಧ್ಯ ಸಂರಕ್ಷಣಾ ತಾಣಗಳಲ್ಲೊಂದಾಗಿದೆ. ಭಾರತ ಸಂವಿಧಾನದ ಭಾಗ iv ರ ಪರಿಚ್ಛೇಧ 48 ಎ(ನಿರ್ದೇಶನಗಳು) 1950 ಕ್ಕೆ ಸಂವಿಧಾನ(42 ನೇ ತಿದ್ದುಪಡಿ) ಕಾಯ್ದೆ 1976 ರಲ್ಲಿ ರಾಜ್ಯಗಳು ಅರಣ್ಯಗಳು ಮತ್ತು ವನ್ಯಜೀವಿಗಳ ಸುರಕ್ಷತೆ ಸಲುವಾಗಿ ಪರಿಸರವನ್ನು ರಕ್ಷಿಸಲು ಮತ್ತು ಅಭಿವೃದ್ಧಿಪಡಿಸಲು ಪ್ರಯತ್ನ ಮಾಡಬೇಕೆಂದು ತಿಳಿಸಿದೆ. ಪರಿಚ್ಛೇಧ 47 ಸಾರ್ವಜನಿಕ ಆರೋಗ್ಯ ಕಾಪಾಡುವುದು ಅಭಿವೃದ್ಧಿಪಡಿಸುವುದು ರಾಜ್ಯಗಳ ಮೂಲ ಕರ್ತವ್ಯ ಎಂಬುದನ್ನು ಬಿಂಬಿಸುತ್ತದೆ. ಪರಿಚ್ಛೇಧ 51–ಎ(ಜಿ) ನೈಸರ್ಗಿಕ ಪರಿಸರ, ಅರಣ್ಯ, ಸರೋವರ, ನದಿ ಮತ್ತು ವನ್ಯ ಜೀವಿಗಳನ್ನು ರಕ್ಷಿಸುವುದು ಮತ್ತು ಅಭಿವೃದ್ಧಿಪಡಿಸುವುದು ಜೀವ ಇರುವ ಪ್ರಾಣಿಗಳ ಬಗ್ಗೆ ಕರುಣೆ ತೋರುವುದು ಭಾರತದ ಪ್ರತಿಯೊಬ್ಬ ಪ್ರಜೆಯ ಮೂಲಭೂತ ಕರ್ತವ್ಯ ಎಂದು ತಿಳಿಸುತ್ತದೆ. ಪರಿಸರ ಎಂಬ ಶಬ್ದವು ವಿಶಾಲವಾದ ಪ್ರತಿಬಿಂಬದಂತಿದ್ದು ಇದರ ಮಿತಿಯೊಳಗೆ ಆರೋಗ್ಯಕರ ವಾತಾವರಣ ಮತ್ತು ಪರಿಸರ ಸಮತೋಲನ ಎರಡೂ ಸೇರುತ್ತದೆ. ಆದ್ದರಿಂದ ಆರೋಗ್ಯಕರವಾದ ವಾತಾವರಣವನ್ನು ನಿರ್ವಹಣೆ ಮಾಡುವುದು ರಾಜ್ಯ ಸರ್ಕಾರದ ಕರ್ತವ್ಯವಷ್ಟೆ ಅಲ್ಲ ಪ್ರತಿಯೊಬ್ಬ ನಾಗರಿಕನ ಕರ್ತವ್ಯವು ಹೌದು. ರಾಜ್ಯ ಈ ವಿಷಯವಾಗಿ ನಿರ್ದಿಷ್ಟವಾದ ಕರ್ತವ್ಯಗಳನ್ನು ಹೊಂದಿದ್ದು ಅದರ ಪರಮಾಧಿಕಾರ ಬಳಸಿ ಅರೋಗ್ಯಕರ ವಾತಾವರಣ ಮತ್ತು ಪರಿಸರ ಸಮತೋಲನ ನಿರ್ವಹಣೆಗೆ ಅಗತ್ಯವಾದ ಕಾರ್ಯನೀತಿಯನ್ನು ರೂಪಿಸಬೇಕಾಗಿದೆ. ಪರಿಚ್ಛೇಧ 21 ಜೀವಿಸುವ ಹಕ್ಕನ್ನು ಮೂಲಭೂತ ಹಕ್ಕೆಂದು ತಿಳಿಸುತ್ತದೆ. ಮರ್ಯಾದೆಯಿಂದ ಜೀವಿಸುವ ಹಕ್ಕು ಅದರ ಒಳಗೆ ಪರಿಸರ ಸಂರಕ್ಷಣೆ, ವಾಯು ಮಾಲಿನ್ಯ ಜಲಮಾಲಿನ್ಯದಿಂದ ಹೊರತಾದ ಚರಂಡಿ ವ್ಯವಸ್ಥೆ ಇದನ್ನು ಬಳಸುವುದು ಒಳಗೊಂಡಂತೆ ಜೀವನವನ್ನು ಅನುಭವಿಸಲು ಸಾಧ್ಯವಾಗುವುದಿಲ್ಲ. ಯಾವುದೇ ವಿರೋಧವಾದ ಕ್ರಮಗಳು ಕಾರ್ಯಗಳು ಪರಿಸರ ಮಾಲಿನ್ಯಕ್ಕೆ ಕಾರಣವಾಗುತ್ತವೆ. ಆದ್ದರಿಂದ ಆರೋಗ್ಯಕರ ವಾತಾವರಣ ಅನ್ನುವುದು ಅರೋಗ್ಯಕರ ಜೀವನ ನಡೆಸಲು ಒಂದು ಅವಿಭಾಜ್ಯ ಅಂಗವಾಗಿರುತ್ತದೆ. ಆರೋಗ್ಯಕರ ವಾತಾವರಣವಿಲ್ಲದೆ ಮರ್ಯಾದೆಯಿಂದ ಮಾನವ ಜೀವನ ನಡೆಸುವುದು ಸಾಧ್ಯವಿಲ್ಲ. ಆದ್ದರಿಂದ ಪರಿಸರ ಸಂರಕ್ಷಣೆಯು ಮಾನವನ ಉಳಿಯುವಿಕೆಗೆ ಗಂಭೀರವಾಗಿ ಕಾಳಜಿ ತೆಗೆದುಕೊಳ್ಳಬೇಕಾದ ವಿಷಯ. ಪರಿಸರ ಸಂರಕ್ಷಣೆಯ ಉತ್ತೇಜನದಲ್ಲಿ ಮಾನವ ನಿರ್ಮಿತ ಮತ್ತು ನೈಸರ್ಗಿಕ ಪರಿಸರ ನಿರ್ವಹಣೆಯೂ ಸಹ ಒಟ್ಟಾರೆ ಸೇರುತ್ತದೆ. ಆದ್ದರಿಂದ ಕೇಂದ್ರ ಸರ್ಕಾರ, ರಾಜ್ಯ ಸರ್ಕಾರ ಮತ್ತು ಸ್ಥಳೀಯ ಸಂಸ್ಥೆಗಳಾದ ಪುರಸಭೆಗಳು ಸಂವಿಧಾನದ ಅನ್ವಯ ಸರಿಯಾಗಿ ಪರಿಸರ ಸುರಕ್ಷತೆ ಕ್ರಮಗಳನ್ನು ಕೈಗೊಳ್ಳುವುದು ಕಡ್ಡಾಯವಲ್ಲದೆ ಮಾನವ ನಿರ್ಮಿತ ಮತ್ತು ನೈಸರ್ಗಿಕ ಪರಿಸರವನ್ನು ಉತ್ತೇಜಿಸಲು ರಕ್ಷಿಸಲು ಮತ್ತು ಅಭಿವೃದ್ಧಿಪಡಿಸಲು ಸಾಕಷ್ಟು ಕ್ರಮಗಳನ್ನು ಕೈಗೊಳ್ಳವುದು ಕಡ್ಡಾಯವಾಗುತ್ತದೆ.

(xii) ಗೇಣಿ ಗುತ್ತಿಗೆಯ ಹಕ್ಕು ವರ್ಗಾವಣೆ: ಈ ಗುತ್ತಿಗೆಗಳನ್ನು ಅಂದಿನ ಬ್ರಿಟಿಷ್ ಜನರಿಗೆ/ಕಂಪೆನಿಗಳಿಗೆ 20 ನೇ ಶತಮಾನದ ಪ್ರಾರಂಭದಲ್ಲಿ ಆಗ ಇದ್ದ ಸಾಮಾಜಿಕ, ರಾಜಕೀಯ ಮತ್ತು ಆರ್ಥಿಕ ಪರಿಸ್ಥಿತಿ ಮತ್ತು ವೈಜ್ಞಾನಿಕ ತಿಳುವಳಿಕೆಯ ಮೇಲೆ ನೀಡಲಾಗಿರುತ್ತದೆ. ಈ ಮಂಜೂರಾತಿಗಳನ್ನು ಎಲ್ಲಾ ಪ್ರಕರಣಗಳಲ್ಲಿ ಇತರೆ ವ್ಯಕ್ತಿಗಳಿಗೆ/ಕಂಪನಿಗಳಿಗೆ ಮತ್ತು ಕೆಲವು ಪ್ರಕರಣಗಳಲ್ಲಿ ಹಲವಾರು ಬಾರಿ ವರ್ಗಾವಣೆ ಮಾಡಲಾಗಿದೆ. ಭಾರತದ ಸರ್ವೋಚ್ಚ ನ್ಯಾಯಾಲಯವು ಮೆ:ವಿಕ್ಟೋರಿಯನ್ ಗ್ರಾನೈಟ್ಸ್ (ಪ್ರೈ) ಲಿ. ವಿರುದ್ಧ ಪಿ.ರಾಮರಾವ್ ಮತ್ತು ಇತರರು ಪ್ರಕರಣಕ್ಕೆ 9 ಸೆಪ್ಟೆಂಬರ್ 1996 ರಂದು ನೀಡಿರುವ ತೀರ್ಪಿನಲ್ಲಿ ಈ ರೀತಿ ತಿಳಿಸಿದೆ. ಗುತ್ತಿಗೆಯ ಹಕ್ಕಿನ ವರ್ಗಾವಣೆ ಭಾರತ ಸಂವಿಧಾನದ ಪರಿಚ್ಛೇಧ 39(ಬಿ) ಯಲ್ಲಿನ ಅವಕಾಶಗಳಿಗೆ ಮತ್ತು ಸಂವಿಧಾನದ ಪ್ರಸ್ತಾವನೆ ಹಾಗೂ ಮೂಲಭೂತ ಹಕ್ಕುಗಳಿಗೆ ವಿರುದ್ಧವಾಗಿದೆ. ಸಂವಿಧಾನದ ಕಲಂ 39(ಬಿ) ವಿಶೇಷವಾಗಿ ರಾಜ್ಯ ಸರ್ಕಾರಗಳು ಸಾಮೂಹಿಕ ಸಾಧನ ಸಂಪನ್ಮೂಲಗಳ ಮಾಲೀಕತ್ವ ಮತ್ತು ನಿಯಂತ್ರಣದ ಬಗ್ಗೆ ನಿರ್ದೇಶನಗಳನ್ನು ಅದರ ಕಾರ್ಯ ನೀತಿಯಲ್ಲಿ ನೀಡಿ ಎಲ್ಲಾ ಜನ ಸಾಮಾನ್ಯರಿಗೆ ಸಂಪನ್ಮೂಲಗಳು ದೊರಕುವಂತೆ ಮಾಡಬೇಕು. ಸಾರ್ವಜನಿಕ ಸಂಪನ್ಮೂಗಳು ಒಂದು ಅರ್ಥ ಪೂರ್ಣ ಬದುಕಿನ ಹಕ್ಕು ನೀಡಲು ಸಾಧ್ಯವಾಗುವಂತೆ ವಿತರಿಸಿ ಆರ್ಥಿಕ ಸದೃಢತೆಯನ್ನು ಪಡೆಯಲು ಸಾಕಷ್ಟು ಸಂಪನ್ಮೂಲಗಳು ಮತ್ತು ಅವಕಾಶಗಳು ದೊರೆಯಬೇಕು. ಇಲ್ಲಿಯ ಪ್ರಶ್ನೆ: ಈ ವರ್ಗಾವಣೆ ಸಂವಿಧಾನದ ಉದ್ದೇಶದಂತೆ ಸಾಮಾನ್ಯರಿಗೆ ಒಳ್ಳೆಯದನ್ನು ಮಾಡುವುದೇ? ಸರ್ಕಾರದಿಂದ ಗಣಿಗಾರಿಕೆಗೆ ಗುತ್ತಿಗೆಯನ್ನು ವ್ಯಕ್ತಿಗಳಿಗೆ ನೀಡಿದಲ್ಲಿ ಅವರ ಸಹಕಾರಿ ಸಂಘದ, ಗಣಿಗಳಲ್ಲಿ ಕೆಲಸ ಮಾಡುವ ವ್ಯಕ್ತಿಗಳ

ಪಾಲುಗಾರಿಕೆಗಳು ಆರ್ಥಿಕ ಸಧೃಢತೆ ಹೆಚ್ಚಿಸುವುದೆನ್ನುವುದು ನಿಜ. ಆದರೆ ಅಂತಹ ವರ್ಗಾವಣೆಗಳನ್ನು ಮಾಡುವಾಗ ಸಂವಿಧಾನದ ತತ್ವ ಸಿದ್ದಾಂತಗಳನ್ನು ಧ್ವಂಸ ಮಾಡಿ ಮಾಡಬಹುದೇ? ಆದರೆ ಉತ್ತರ ಸ್ಪಷ್ಟವಾಗಿ ನಕಾರಾತ್ಮಕವಾಗುತ್ತದೆ. ಸರ್ಕಾರವು ತಿದ್ದುಪಡಿ ಮಾಡಿರುವ ನಿಯಮಗಳಲ್ಲಿ ಮಂಜೂರಾತಿ ಒಪ್ಪಂದವಾದ ನಂತರ ಒಬ್ಬರಿಂದ ಒಬ್ಬರಿಗೆ ಗೇಣಿ ಹಕ್ಕುಗಳನ್ನು ವರ್ಗಾವಣೆ ಮಾಡಲು ನಿರ್ದೇಶಕರಿಗೆ ಅಧಿಕಾರವಿರುತ್ತದೆ. ಆದರೆ ಎರಡು ವರ್ಷಗಳೊಳಗೆ ವರ್ಗಾವಣೆ ಆಗ ಬೇಕಿದ್ದಲ್ಲಿ ಸರ್ಕಾರದ ಅನುಮತಿಯನ್ನು ಪಡೆಯುವುದು ಅವಶ್ಯ. ಇದನ್ನು ಕೆಳಮಟ್ಟದ ಅಧಿಕಾರಿಗಳೊಂದಿಗೆ ಭ್ರಷ್ಟಾಚಾರ ಮಾಡಿ ಅವ್ಯವಹಾರದಿಂದ ಒಬ್ಬ ವ್ಯಕ್ತಿಯ ಸ್ವಂತಗಳಿಕೆಗೆ ಅಥವಾ ದುರುದ್ದೇಶ ಆಸಕ್ತಿಗಳು ಸಂವಿಧಾನದ ಪರಿಚ್ಛೇಧ 39(ಬಿ) ಯಲ್ಲಿ ಮತ್ತು ಸಂವಿದಾನದ ಪ್ರಸ್ತಾವನೆ ಮತ್ತು ಮೂಲ ಭೂತ ಹಕ್ಕುಗಳಲ್ಲಿನ ಉದ್ದೇಶಕ್ಕೆ ಧಕ್ಕೆ ಬಾರದಂತೆ ನಿಯಂತ್ರಿಸುವ ಉದ್ದೇಶದಿಂದ ಇದನ್ನು ಮಾಡಲಾಗಿದೆ. ವರ್ಗಾವಣೆ ಪದ್ದತಿಯು ಭ್ರಷ್ಟಾಚಾರಕ್ಕೆ ಮತ್ತು ಪಕ್ಷಪಾತಕ್ಕೆ ಮತ್ತು ಗುಪ್ತವಾಗಿ ಮಾಡಲಾದ ಅಧಿಕಾರಿಗಳ ಕಾರ್ಯಗಳು ಸಂವಿಧಾನದ ಉದ್ದೇಶವನ್ನು ವಿಧ್ವಂಸಗೊಳಿಸುತ್ತವೆ. ದೊಡ್ಡ ಮೀನು ಕೊಳದಲ್ಲಿನ ಬಗೆ ಬಗೆಯ ಚಿಕ್ಕ ಮೀನುಗಳನ್ನು ಆ ಪ್ರದೇಶದಿಂದ ಓಡಿಸುವ ಸಲುವಾಗಿ ಸದಾ ತಿನ್ನುತ್ತಿರುತ್ತವೆ. ಕಾನೂನು ಕ್ರಮದಂತೆ ಕ್ರಮ ಕೈಗೊಳ್ಳಲು ಪ್ರಾಮುಖ್ಯತೆ ನೀಡಿದ್ದಲ್ಲಿ ಸಂವಿದಾನದ ಉದ್ದೇಶಕ್ಕೆ ಸೋಲುಂಟಾಗಿ ಮಾರುಕಟ್ಟೆಯಲ್ಲಿ ಏಕಸ್ವಾಮ್ಯವೇರ್ಪಟ್ಟು ಕೇವಲ ಕೆಲವು ಪಟ್ಟಭದ್ರ ಹಿತಾಸಕ್ತಿಗಳು ಆರ್ಥಿಕ ಹಿಡಿತ ನಿಯಂತ್ರಿಸಿದಂತಾಗುತ್ತದೆ.

(xiii) **ಸಾರ್ವಜನಿಕ ದತ್ತಿ ಸಿದ್ಧಾಂತ:** ಭಾರತದ ಸರ್ವೋಚ್ಚ ನ್ಯಾಯಾಲಯವು ಎಂ.ಸಿ.ಮೆಹತಾ ವಿರುದ್ಧ ಕಮಲ್‌ನಾಥ್ ಮತ್ತು ಇತರರು (1997 (1) ಎಸ್‌ಸಿಸಿ 388 ಪುಟ 413 ರಲ್ಲಿ ಪ್ಯಾರಾ 34) ಪ್ರಕರಣಕ್ಕೆ 13 ಡಿಸೆಂಬರ್ 1996 ರಂದು ನೀಡಿರುವ ತೀರ್ಪಿನಲ್ಲಿ ಈ ಕೆಳಕಂಡಂತೆ ತಿಳಿಸಿದೆ. "34– ಇಂಗ್ಲೀಷ್ ಸಾಮಾನ್ಯ ಕಾನೂನಿನ ಮೇಲೆ ಆಧಾರಿತವಾಗಿರುವ ನಮ್ಮ ಕಾನೂನು ಪದ್ದತಿಯು ಸಾರ್ವಜನಿಕ ದತ್ತಿ ಸಿದ್ದಾಂತವನ್ನು ತನ್ನ ನ್ಯಾಯಶಾಸ್ತ್ರದ ಭಾಗದಲ್ಲಿ ಒಳಗೊಂಡಿರುತ್ತದೆ. ರಾಜ್ಯವು ಸ್ವಾಭಾವಿಕವಾಗಿ ಸಾರ್ವಜನಿಕ ಬಳಕೆ ಮತ್ತು ಅನುಭವಕ್ಕೆ ಇರುವ ಎಲ್ಲಾ ಸ್ವಾಭಾವಿಕ ಸಂಪನ್ಮೂಲಗಳು ಧರ್ಮದರ್ಶಿಯಾಗಿದೆ. ಸಾರ್ವಾಜನಿಕರು ಸಮುದ್ರ ದಡ,ಹರಿಯುವ ನೀರು, ಗಾಳಿ ಅರಣ್ಯಗಳು ಮತ್ತು ಜೀವಿ ವೈವಿಧ್ಯತೆಯ ಸೂಕ್ಷ್ಮತೆಯ ಫಲಾನುಭವಿಗಳು ಧರ್ಮದರ್ಶಿಯಾಗಿ ನೈಸರ್ಗಿಕ ಸಂಪನ್ಮೂಲಗಳನ್ನು ರಕ್ಷಿಸುವುದು ರಾಜ್ಯದ ಕಾನೂನು ಬದ್ದ ಕರ್ತವ್ಯ. ಈ ಸಂಪನ್ಮೂಲಗಳು ಸಾರ್ವಜನಿಕರ ಉಪಯೋಗಕ್ಕಾಗಿ ಇವೆಯೇ ಹೊರತು ಅದನ್ನು ಖಾಸಗಿ ಒಡೆತನ್ನಕ್ಕೆ ಪರಿವರ್ತಿಸಲು ಸಾಧ್ಯವಿಲ್ಲ. ಸರ್ವೋಚ್ಛ ನ್ಯಾಯಾಲಯವು ನೈಸರ್ಗಿಕ ಸಂಪನ್ಮೂಲಗಳಿಗೆ ಸಂಬಂಧಿಸಿದ ಹಲವಾರು ಪ್ರಕರಣಗಳಲ್ಲಿ ಸಾರ್ವಜನಿಕ ದತ್ತಿ ಸಿದ್ದಾಂತವನ್ನು ತನ್ನ ನ್ಯಾಯ ಶಾಸ್ತ್ರದ ಭಾಗವೆಂದು ತಿಳಿಸಿ ಅನ್ವಯ ಮಾಡಿದೆ. ಗುತ್ತಿಗೆ ನೀಡಿರುವ ಪ್ರದೇಶಗಳು ಮೀಸಲು/ಪೈಸಾರಿ ಅರಣ್ಯ ಪ್ರದೇಶಗಳು ರಾಜ್ಯವು ಧರ್ಮದರ್ಶಿಯಾಗಿ ನೈಸರ್ಗಿಕ ಸಂಪನ್ಮೂಲಗಳನ್ನು ರಕ್ಷಿಸುವಲ್ಲಿ ಕಾನೂನಿನ ಅನ್ವಯ ಕರ್ತವ್ಯ ನಿರ್ವಹಿಸಬೇಕು. ಗೇಣಿದಾರರು ವಾಣಿಜ್ಯ ನೆಡುತೋಪುಗಳ ಸಾಗುವಳಿಯನ್ನು ಅವರ ಲಾಭಕ್ಕಾಗಿ ಮಾಡುತ್ತಿದ್ದಾರೆ. ಸಾರ್ವಜನಿಕರ ಉಪಯೋಗಕ್ಕಾಗಿ ಇರುವ ಈ ನೈಸರ್ಗಿಕ ಸಂಪನ್ಮೂಲಗಳನ್ನು ಖಾಸಗಿ ಒಡೆತನಕ್ಕೆ ಪರಿವರ್ತಿಸಲು ಸಾಧ್ಯವಿಲ್ಲ.

(xiv) **ವಂಶ ಪಾರಂಪರಿಕತೆಯ ನೀತಿ:** ಮಾನ್ಯ ಸರ್ವೋಚ್ಚ ನ್ಯಾಯಾಲಯವು ಹಿಮಾಚಲ ಪ್ರದೇಶ ರಾಜ್ಯ ಮತ್ತು ಇತರರು ವಿರುದ್ದ ಗಣೇಶ್ ವುಡ್ ಪ್ರಾಡೆಕ್ಟ್ಸ್ ಮತ್ತು ಇತರರು (ಎಐಆರ್ 1995 ಎಸ್‌ಸಿ 149) ಪ್ರಕರಣಕ್ಕೆ 11 ಸೆಪ್ಟಂಬರ್ 1995 ರಂದು ನೀಡಿರುವ ತೀರ್ಪಿನಲ್ಲಿ ಈ ರೀತಿ ತಿಳಿಸಿದೆ. "ವಂಶಪಾರಂಪರಿಕ ನೀತಿಯೆಂದರೆ ಮುಂದಿನ ಪೀಳಿಗೆಯ ಬಗ್ಗೆ ತೋರಿಸುವ ಕಾಳಜಿ. ಈಗಿನ ಪೀಳಿಗೆಗೆ ಮುಂದಿನ ಪೀಳಿಗೆಯ ಮತ್ತು ಮುಂಬರುವ ಪೀಳಿಗೆಯ ಭದ್ರತೆ ಮತ್ತು ಹಸನಾದ ಬದುಕನ್ನು ಅಪಾಯಕ್ಕೀಡು ಮಾಡುವ ಯಾವುದೇ ಹಕ್ಕು ಇರುವುದಿಲ್ಲ."

(xv) **"ಮುನ್ನೆಚ್ಚರಿಕೆಯ ತತ್ವಗಳು" ಮತ್ತು "ಕಲುಷಿತಗೊಳಿಸುವವನು ಪಾವತಿಸುವ ತತ್ವ":** ಭಾರತದ ಸರ್ವೋಚ್ಚ ನ್ಯಾಯಾಲಯವು ವೆಲ್ಲೂರು ಸಿಟಿಜನ್ಸ್ ವೆಲ್‌ಫೇರ್ ಫೋರಮ್ ವಿರುದ್ಧ ಭಾರತದ ಒಕ್ಕೂಟ ಮತ್ತು ಇತರರು (ಎಐಆರ್ 1996 ಎಸ್‌ಸಿ 2715) ಪ್ರಕರಣದಲ್ಲಿ "ಮುನ್ನೆಚ್ಚರಿಕೆಯ ತತ್ವಗಳು" ಮತ್ತು "ಕಲುಷಿತಗೊಳಿಸಿ ಪಾವತಿಸುವ ತತ್ವ" ಈ ಕೆಳಕಂಡಂತೆ ವಿವರಿಸುತ್ತದೆ. "ಮುನ್ನೆಚ್ಚರಿಕೆಯ ತತ್ವ" ಮತ್ತು "ಕಲುಷಿತಗೊಳಿಸುವವನು ಪಾವತಿಸುವ ತತ್ವ"ಗಳು "ಸುಸ್ಥಿರ ಅಭಿವೃದ್ಧಿಗೆ" ಅತ್ಯವಶ್ಯ. ಪುರಸಭೆಯ ಕಾನೂನಿನ ಸಂದರ್ಭದಲ್ಲಿ "ಮುನ್ನೆಚ್ಚರಿಕೆಯ ತತ್ವ"

(ಎ) ಪರಿಸರ ಕಾರ್ಯಕ್ರಮಗಳು: ರಾಜ್ಯ ಸರ್ಕಾರದಿಂದ ಅಥವಾ ಯಾವುದೇ ಶಾಸನ ಬದ್ಧ ಪ್ರಾಧಿಕಾರದಿಂದ ಇವು ಪರಿಸರ ಕ್ಷೀಣಿಕೆಗೆ ಕಾರಣಗಳನ್ನು ಅಂದಾಜು ಮಾಡಿ ಅವುಗಳ ಮೇಲೆ ದಾಳಿ ಮಾಡಿ ನಿಯಂತ್ರಿಸಬೇಕು.

(ಬಿ) ಎಲ್ಲಿ ಗಂಭೀರವಾದ ಮತ್ತು ಪುನ: ಸ್ಥಾಪಿಸಲಾಗದಂತಹ ನಾಶಗಳ ಭೀತಿ ಇದೆಯೋ ಅಲ್ಲಿ ವೈಜ್ಞಾನಿಕ ಸೌಲಭ್ಯವಿಲ್ಲವೆಂಬ ಕಾರಣವನ್ನು ನೀಡಿ ಪರಿಸರ ಕ್ಷೀಣಿಕೆ ತಡೆಗಟ್ಟುವ ರಕ್ಷಣಾ ಕ್ರಮಗಳನ್ನು ಮುಂದೂಡಬಾರದು.

(ಸಿ) "ಸಾಕ್ಷಿಯ ಭಾರ" ನಟನ ಅಥವಾ ಅಭಿವೃದ್ಧಿದಾರ:ಕೈಗಾರಿಕೋದ್ಯಮಿಯ ಮೇಲಿದ್ದು ಅವನು ಅವನ ಕ್ರಮಗಳು ಪರಿಸರಕ್ಕೆ ಪೂರಕವಾಗಿದೆ ಎಂಬುದನ್ನು ತೋರಿಸಬೇಕು.

(xvi) **ಕೂರ್ಗ್ ಅರಣ್ಯ ಕೈಪಿಡಿ:** ಸರ್ಕಾರವು "ಕೂರ್ಗ್ ಕಂದಾಯ ಕೈಪಿಡಿ" ಪ್ರಕಟಿಸಿದಂತೆಯೇ "ಕೂರ್ಗ್ ಅರಣ್ಯ ಕೈಪಿಡಿ" ಯನ್ನು ಅಂದಿನ ಕೂರ್ಗ್ ಪ್ರಾಂತ್ಯ, ನಂತರ ಭಾರತ ಸಂವಿಧಾನದಡಿ 'ಸಿ' ರಾಜ್ಯ ಮತ್ತು ಈಗ ಕರ್ನಾಟಕದ ಒಂದು ಜಿಲ್ಲೆಗಾಗಿ ಪ್ರಕಟಿಸಿದೆ. ಅರಣ್ಯ ಅಧಿಕಾರಿಗಳು ಕೂರ್ಗ್ ಅರಣ್ಯ ಕೈಪಿಡಿಯಲ್ಲಿ ನೀಡಲಾಗಿರುವ ಪರಿಮಾಣಗಳ ಅಡಿಯಲ್ಲೇ ಕಾರ್ಯ ನಿರ್ವಹಿಸಬೇಕು. "ಕೆಲವು ನಿಶ್ಚಿತ ಸಾಗುವಳಿ ಉದ್ದೇಶಕ್ಕೆ ಅರಣ್ಯ ಭೂಮಿ ಗುತ್ತಿಗೆ ನೀಡುವ ಸಂಬಂಧ ಇರುವ ಕಾನೂನು" ಗಳನ್ನು ಸಹಾ ಕೂರ್ಗ್ ಅರಣ್ಯ ಕೈಪಿಡಿ 1957 ರ ಅನುಬಂಧ 1(1 ನೇ ಮಾರ್ಚ್ 1955 ರವರೆಗೆ ತಿದ್ದುಪಡಿ ಮಾಡಲಾಗಿರುವುದು) ಪುಟ ಸಂಖ್ಯೆ '114 ರಿಂದ 131 ರಲ್ಲಿ ನೀಡಲಾಗಿದೆ. ನಿಯಮ 9 ಈ ರೀತಿ ತಿಳಿಸುತ್ತದೆ. "ಮೇಲೆ ಹೇಳಿದ 99 ವರ್ಷಗಳು ಮುಗಿದ ನಂತರ ಗುತ್ತಿಗೆ ನೀಡಲಾಗಿರುವ ಭೂಮಿಗಳು ಅದರಲ್ಲಿ ಮಾಡಿರುವ ಎಲ್ಲಾ ಅಭಿವೃದ್ದಿಯೊಂದಿಗೆ ಹಿಡುವಳಿದಾರನ ವಶಕ್ಕೆ ಬರುತ್ತದೆ" (ಪುಟ 131).

(xvii) **ಸಾಮಾಜಿಕ ಬದ್ಧತೆ:** ಭಾರತದ ಸರ್ವೋಚ್ಚ ನ್ಯಾಯಾಲಯವು ಅಂಬಿಕಾ ಕ್ವಾರಿ ವರ್ಕ್ಸ್ ವಿರುದ್ದ ಗುಜರಾತ್ ರಾಜ್ಯ (ಎಐಆರ್ 1987 ಎಸ್‌ಸಿ 1073) ಪ್ರಕರಣದಲ್ಲಿ ನೀಡಿರುವ ತೀರ್ಪಿನಲ್ಲಿ ಈ ರೀತಿ ಹೇಳಿದೆ: "ಅರಣ್ಯ (ಸಂರಕ್ಷಣೆ) ಕಾಯ್ದೆ 1980 ಒಂದು ಲೋಕಸಭೆಯಲ್ಲಿ ಅಂಗೀಕೃತವಾದ ಕಾಯಿದೆಯಾಗಿದ್ದು ಅರಣ್ಯ ಸಂರಕ್ಷಣೆ ಮತ್ತು ಅದಕ್ಕೆ ಸಂಬಂಧಿಸಿದ ಅಥವಾ ಅದರ ಅಧೀನದ ವಿಷಯಗಳಿಗೆ ಸಂಬಂಧಿಸಿದೆ. ಅರಣ್ಯ (ಸಂರಕ್ಷಣೆ) ಕಾಯ್ದೆಯು ನಿರ್ವನೀಕರಣದಿಂದ ಪರಿಸರ ಸಮತೋಲನ ಹಾಳಾಗಿ ಇವು ಒಂದು ಸಾಮಾಜಿಕ ಪಿಡುಗಾಗಿರುವುದರಿಂದ ಮತ್ತು ಇದನ್ನು ಕೂಡಲೇ ತಡೆಯಬೇಕೆಂಬ ಅರಿವನ್ನು ಮಾನ್ಯ ಮಾಡಲು ತಂದ ಒಂದು ಕಾಯ್ದೆಯಾಗಿದೆ. ಇದು 1980 ರ ಕಾಯ್ದೆಯ

ಪ್ರಾಥಮಿಕ ಉದ್ದೇಶವಾಗಿ ಗೋಚರಿಸುತ್ತದೆ. ಪ್ರಾಥಮಿಕ ಕರ್ತವ್ಯವು ಸಮಾಜ ಮುಖಿಯಾಗಿರಬೇಕು ಮತ್ತು ಈ ಕರ್ತವ್ಯವು ಆದ್ಯತೆ ಪಡೆಯುತ್ತದೆ. ಸಮಾಜದ ಬಗ್ಗೆ ಇರುವ ಬಾಧ್ಯತೆಯು ವ್ಯಕ್ತಿಗಳ ಬಗ್ಗೆ ಇರುವ ಬಾಧ್ಯತೆಗಿಂತ ಹೆಚ್ಚಿನ ಪ್ರಾಶಸ್ತ್ಯ ಪಡೆಯಬೇಕು.

(xviii) **ಅರಣ್ಯ ಕವಚ:** ಭಾರತದ ಸರ್ವೋಚ್ಚ ನ್ಯಾಯಾಲಯ ಪ್ರದೀಪ್ ಕೃಷ್ಣನ್ ವಿರುದ್ಧ ಭಾರತದ ಒಕ್ಕೂಟ ಮತ್ತು ಇತರರು (ಎಐಆರ್ 1996 ಎಸ್‌ಸಿ 2040) ಪ್ರಕರಣದಲ್ಲಿ ನೀಡಿರುವ ತೀರ್ಪಿನಲ್ಲಿ ಈ ರೀತಿ ತಿಳಿಸಿದೆ. "ನಮ್ಮ ದೇಶದಲ್ಲಿ ಒಟ್ಟು ಅರಣ್ಯ ಕವಚವು ಸಹಜವಾಗಿ ಇರಬೇಕಾದ ಒಟ್ಟಾರೆ ಭೂಪ್ರದೇಶದ ಕನಿಷ್ಠ ಮೂರನೇ ಒಂದು ಭಾಗಕ್ಕಿಂತ ಬಹಳಷ್ಟು ಕಡಿಮೆ ಇದೆ. ಆದ್ದರಿಂದ ನಾವು ದೇಶದಲ್ಲಿ ಇರುವ ಅರಣ್ಯ ಕವಚ ಮತ್ತಷ್ಟು ಕ್ಷೀಣಿಸುವುದನ್ನು ಸಹಿಸಲು ಸಾಧ್ಯವಿಲ್ಲ".

ಕೊಡಗು ಜಿಲ್ಲೆಯ ವಿವಿಧ ರಬ್ಬರ್ ಕಂಪನಿಗಳಿಗೆ ನೀಡಲಾದ ಅರಣ್ಯ ಪ್ರದೇಶಗಳ ಗುತ್ತಿಗೆ ಅವಧಿಯನ್ನು 99 (ತೊಂಬತ್ತೊಂಬತ್ತು) ವರ್ಷಗಳಿಗೆ ಸೀಮಿತಗೊಳಿಸುವ ಹಾಗೂ ಅವಧಿ ಕೊನೆಗೊಂಡ ಗುತ್ತಿಗೆಗಳನ್ನು ಅರಣ್ಯ ಕೊನೆಗೊಳಿಸಿ ಸದರಿ ಅರಣ್ಯ ಪ್ರದೇಶಗಳನ್ನು ಸರ್ಕಾರಕ್ಕೆ ಹಿಂಪಡಿಯುವ ಪ್ರಸ್ತಾವನೆಗೆ ಮಾನ್ಯ ಸಚಿವ ಸಂಪುಟವು ಸಂಖ್ಯೆ ಸಿ–209/2012, ದಿನಾಂಕ:07.05.2012 ರಲ್ಲಿ ಅನುಮೋದನೆಯನ್ನು ನೀಡಿದೆ.

ಅದರಂತೆ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ ಅಪಜೀ 192 ಎಫ್‌ಎಲ್‌ಎಲ್ 2008, ಬೆಂಗಳೂರು, ದಿನಾಂಕ:19ನೇ ಡಿಸೆಂಬರ್ 2012

ಮೇಲೆ ವಿವರಿಸಿದ ಅಂಶಗಳು ಮತ್ತು ಸಂದರ್ಭಗಳನ್ನು ಗಮನದಲ್ಲಿಟ್ಟುಕೊಂಡು ಮತ್ತು ಕಾನೂನಿನಲ್ಲಿ ಇರುವ ಅವಕಾಶಗಳು, ಸರ್ಕಾರದ ಕಾರ್ಯನೀತಿ,ನ್ಯಾಯಾಲಯುದ ಆದೇಶಗಳು ಇವುಗಳನ್ನು ಪರಿಗಣಿಸಿ ಸರ್ಕಾರವು ಕೆಳಕಂಡಂತೆ ಆದೇಶಿಸಿದೆ.

(i) ಕೊಡಗು ಜಿಲ್ಲೆಯಲ್ಲಿರುವ ಖಾಸಗಿ ರಬ್ಬರ್ ಕಂಪನಿಗಳ ಗೇಣಿ ಅವಧಿಯನ್ನು ಮೂಲ ಗೇಣಿ ದಿನಾಂಕದಿಂದ 99 ವರ್ಷಗಳ ಅವಧಿಗೆ ಮಿತಿಗೊಳಿಸುವುದು.

(ii) ಈ ಭೂಮಿಗಳನ್ನು ಗುತ್ತಿಗೆಯ ಅವಧಿಯು ಪೂರ್ಣವಾದ ತಕ್ಷಣ ಮೀಸಲು ಅರಣ್ಯವೆಂದು ಪರಿಗಣಿಸುವುದು.

(iii) ಭೂಮಿಗಳನ್ನು ಅರಣ್ಯ ಇಲಾಖೆಯ ವಶಕ್ಕೆ ಹಿಂಪಡೆಯುವುದು.

ಕರ್ನಾಟಕ ರಾಜ್ಯ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಎಸ್.ಬಾಲಕೃಷ್ಣಯ್ಯ

ಸರ್ಕಾರದ ಅಧೀನ ಕಾರ್ಯದರ್ಶಿ,

ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ.

FOREST, ECOLOGY & ENVIRONMENT SECRETARIAT

Sub : Period of lease in respect of leases in Forest Land in Kodagu district – restriction of lease period to 99 years and resuming the Reserve Forest Land to Government.

Read : Letter No.A5(2)GFL.CR.31/10-11, dated 27.8.2010 from the Principal Chief Conservator of Forests (Head of Forest Force), Bangalore.

Preamble

1. **Status of Kodagu district**: The province of Coorg (the present Kodagu district) was annexed by the British in 1834. It was (i) an unattached province from 1834 to 1874; (ii) a 'Scheduled District' under the Scheduled Districts Act, 1874 (Act XIV of 1874) from 1874 to 1950; (iii) a 'C' State under the Constitution of India from 1950 to 1956. It became Coorg (now Kodagu from 1977) district in the Mysore (now Karnataka from 1973) State as per the provisions in 'the State Reorganisation Act (Act No. 36 of 1956), with effect from 1st November 1956.

2. **Administration of the Coorg province**: The Coorg province was under the direct control of the Government of India from May 1834 to October 1956. The Chief Commissioner ('Resident' from 1881) of the Native State of Mysore was the ex-officio Chief Commissioner of Coorg up to 1956. The Chief Commissioner of Coorg, with headquarters at Bangalore, was the direct representative of the Government of India in Coorg. As the Coorg province was under the 'direct orders' of the Government of India in Coorg, the Government of India was itself the 'Local Government' and the Chief Commissioner of Coorg constituted a "Local Administration' as administering the orders of the Local Government. All the government business in Coorg was transacted in the name of the Chief Commissioner of Coorg.

3. **Relevant Statutes**: The Chief Commissioner of Coorg, Bangalore, vide Notification No. 11, dated the 15th March 1887, extended the Indian Forest Act, 1878 (Act VII of 1878) to the province of Coorg. The Notification was published in the Coorg District Gazette Volume III No. 6 dated the 1st June 1887 in Part I on page 640. The Crown [now called Government] Grants Act (Act 15 of 1895) came into force in the year 1895. The Coorg Land and Revenue Regulation, 1899 (Regulation No. I of 1899) and the Rules made thereunder came into force with effect from 1st November 1899. The Karnataka Land Revenue Act, 1964 (Act No. 12 of 1964) came into force with effect from 1st April 1964 and the Coorg Land and Revenue Regulation, 1899 was repealed. The Karnataka Forest Act, 1963 (Act No. 5 of 1964) came into force with effect from the 1st June 1969, vide Notification No. S.O. 491 dated the 1st March 1969.

4. **Statutory Reserved Forests**:The Chief Commissioner of Coorg, Bangalore, has declared the constitution of Patti Ghat and Kadamakal Ghat Reserved Forests in Coorg with effect from the 30thJune 1904 as per the provisions under Section 19 of the Indian Forest Act (VII of 1878) vide Notification Nos. 40 dated the 3rdMay 1904 and 42 dated the 5thMay 1904; and the said Notifications were published in the Coorg District Gazette Volume XX No. 6 dated the 1stJune 1904 in Part I on pages from 38 to 43 and from 43 to 45respectively. Similarly,the Chief Commissioner has declared the constitution of Kerti Reserved Forest vide Notification No. 58 dated 24thJune 1908 and the said notification was published in the Coorg District Gazette Volume XXIV No. 7 dated the 1stJuly 1908 in Part I on pages 104 and 105. The said forestsare'Reserved Forests' under Section 23 of the present Karnataka Forest Act, 1963 (Act No. 5 of 1964). The Government of Karnataka, in exercise of the powers conferred by Section 18 of the Wild Life (Protection) Act, 1972 (Central Act 53 of 1972), declared a part of Kadamakal Ghat Reserved Forest as the Pushpagiri Wildlife Sanctuary in Kodagu district, vide Notification No. AHFF 173 FWL 87 (II) dated 31stAugust 1987/ 1stSeptember 1987. The notification was published in the Karnataka Gazette Vol. 122 No. 40 dated 8thOctober 1987 in Part IV Section 2C (ii) on pages 1399 and 1400.

5. **Paisari land**: The Chief Commissioner of Coorg, Bangalore, vide Notification No. 79, dated 30th September, 1901, notified the rules for the regulation of certain matters relating to *paisari* lands, under the provisions in clause (f) of sub-section (1) of Section 143 of the Coorg Land and Revenue Regulation, 1899. The notification was published in the Coorg District Gazette Volume XVII, No. 10 dated 1st October 1901, in Part I on page 150. The *paisari* land in Kodagu district is defined as 'forest land' in many Government records including the Coorg Revenue Manual, the official Coorg District Gazette and the Karnataka Revenue Survey Manual. It is defined as "All waste and forest lands which are declared by section 42 of the Coorg Land and Revenue Regulation to be the property of the Government, and which have not been notified in the Coorg Gazette as protected forests under section 28 of Act VII of 1878 or as forests reserved under section 3 of the same Act." in the Chief Commissioner of Coorg, Bangalore, Notification No. 98 dated 31stDecember 1912, published in the Coorg District Gazette Vol. XXIX No. 2 dated 1stFebruary 1913, Part I on pages 37and 38 and "Definitions of vernacular, technical and other terms contained in the Revenue Rules", published as appendix III to the Coorg Revenue Manual. The Karnataka Revenue Survey Manual, Volume I, published by the Director of Survey Settlement and Land Records, Bangalore, 1984 Edition, in Chapter II "Glossary of important terms used in the department of Survey Settlement and Land Records, on page 80, *Paisari* land is defined as "All waste and forest lands which are declared to be the property of the Government, and which have not been notified as protected forests or as forests reserved." As per the report prepared by Mr Gustav Haller, the Settlement Officer, Coorg, the area of the paisari land in the district was 1,90,822 acres. The *paisari* land in Kodagu district in general is covered with luxuriant tree growth. As per the Oxford Dictionary, 7thedition, the forest is 'a large tract covered with trees and undergrowth, sometimes mixed with pasture.' The Black's Law Dictionary defines forest as 'a tract of land covered with trees and one usually of considerable extent.'

6. **Statutory rules for lease of government land for rubber cultivation**: The Chief Commissioner of Coorg, Bangalore, vide Notification No. 14, dated 1stFebruary, 1909, notified the rules under which Reserved and *Paisari* Forest land may be demised for rubber cultivation, under the provisions in sections 42 and 143 (1) (f) of the Coorg Land and Revenue Regulation, 1899. The notification was published in the Coorg District Gazette Volume XXV, No. 2 dated 1stFebruary 1909, in Part I on pages from 22 to 24. Similarly, the Chief Commissioner vide Notification No. 35, dated 29thApril 1909, notified the rules under which abandoned coffee lands may be demised for rubber cultivation and the notification was published in the Coorg District Gazette Volume XXV, No. 5 dated 1st May 1909, in Part I on pages from 96 to 101. Further, the Chief Commissioner of Coorg, Bangalore, vide Notification No. 98 dated the 31stDecember 1912 revised the Rules for lease of land for rubber cultivation. The Notification was published in the Coorg District Gazette Volume XXIX No. 2 dated the 1stFebruary 1913 in Part I on pages from 1 to 38. The Chief Commissioner of Coorg, Bangalore, further altered the above rules as Rule for the lease of land for plantation (rule 144 of Rules under the Coorg Land and Revenue Regulation, 1899) vide Notification No. R. F. 281 (1)- 38, dated Bangalore, the 15thJune, 1940. The Notification was published in the Coorg District Gazette Extraordinary No. 23 dated 19thJune 1940, Part I on pages from 282 to 307.

7. **Lease of land for rubber cultivation**: During the period of British rule of the Coorg province, an area of more than 3,700 acres of forest land was leased to some companies owned by British people for rubber cultivation for a period of 999 years. The leases were given in installments during the period between 1910 and 1929. Mr. Charles Edward Murray Aynsley and Mr. Charles Gordon Maclean & The Kadamakal Rubber Syndicate Limited were granted the leases under 1909 Rules; while all the other leases granted to M/s Portland Rubber Company Ltd., The Kadamakal Rubber Syndicate Limited., the Sampaje Rubber Syndicate Ltd. were under the 1912 Lease Rules.

8. **Payments due from the lessees**: The companies, being the lessees of the schedule lands, have to pay to the Government the (i) upset price, (ii) annual lease rent, (iii) local rates leviable under any law for the time being in force in Coorg and (iv) timber value in respect of the schedule land.

(i) **Upset Price**: The lessee has to pay an upset price at a fixed rate for executing the lease demise. The upset price shall not include the value of the timber. The lessees have paid the upset price before the lease demises were issued.

(ii) **Lease rent**: As per Rule (ii) and clause 2 in the schedule of the demise in Notification No. 14, dated the 1st February 1909 and Rule 45 and clause 2 in the schedule of the demise in Notification No. 98, dated 31st December, 1912; as per Rule 62 and clause 8 in the schedule of the demise Form-E, in the Notification No. R. F. 281 (1)- 38, dated the 15th June 1940, sub-rule (3) in rule 144 the Rules made under the Coorg Land and Revenue Regulation, 1899, andthe registered lease indentures/demises, the land so taken shall be free of Government rent for eight years for rubber cultivation from the date of its assignment. Thereafter the rate of rent shall be Rs. 2 an acre, which shall be payable annually on or before 20th March, provided that this rate shall be liable to revision at the end of 30 years from the date of assignment and shall be liable to the payment of local rates leviable under any law for the time being in force in Coorg. The Chief Commissioner of Coorg ordered that the annual lease rent in such cases should be paid to the Forest Department. Mr. P. B. Warburton, Esq., I.C.S., the Secretary to the Chief Commissioner of Coorg, in his letter No. 1070/ F-103/ 1914 dated 21st April 1914 addressed to the Commissioner of Coorg, said as follows: "With reference to your letter Ref. C. No. 73/ A, dated the 3rd April 1914, regarding the question of the crediting of the revenue to be levied on the Portland, Kadamkal and Sampaje Rubber Estates, it is observed that the land in question was Forest land as appears from the demises granted in respect of the Estates and that the mere fact that it has been given on long lease does not, in the Chief Commissioner's opinion, seem to invalidate the right of the Forest Department to draw the revenue. The demarcation should apparently be done by that Department and at their cost. The land has not been disforested and although the actual transaction with the Company has been carried out through yourself or this office, the Chief Commissioner fails to see that the rights of the Forest Department have in any way lapsed." As per the Government Order No. AFD- 327 -FGL- 72 dated 5th July 1974, the lease rent payable per acre per annum was Rs. 250/ (Rupees Two hundred fifty only) with effect from July 1974. Further, as per the Government Order No. FEE 69 FFM 96 dated 29th August 1997, read with the G. O. No. FEE 93 FFM 2001 dated 26th June 2002, in such cases, the lease rent payable per hectare per annum is Rs. 5,000/ (Rupees Five Thousand only) with effect from 1st April 1997. The Hon'ble High Court of Madras in A.K. Thangadurai & Ors.vs. DFO, Madurai &Ors. [AIR 1985 Mad 104] has held that "as pointed out in Bengal Agency vs. T.N. Khanna [AIR 1949 Cal 231] the Government will have the power to enhance the agreed rent unilaterally without reference to the lessee." Further it was held in Naseeruddin v. Umerji Adam & Co., [AIR 1941 Bom 286] that "if the rent is payable on a specific day, it is due then, and is in arrears on the day following. If there is an express covenant for payment, the lessee must seek out the lessor and pay him wherever he may be. It is not necessary that the lessor should make a demand for rent."Hence, it is the duty of the lessee to pay the annual lease rent regularly, if not, the same has to be recovered as per the procedure laid down under the provisions in sub-section (2) of Section 109 of the Karnataka Forest Act, 1963. The lessees have not paid the lease rent so far.

(iii) **Land Revenue (Assessment)**: The words 'rent' and 'local rates' are separately mentioned inthe registered lease indentures. The words 'provided also' in the rules make the rent and local rates separate and distinct.The lessee, in other words, has to pay the annual lease rent apart from his liability to pay the assessments at the local rates leviable. As per the provisions in rule 125 of the rules made under the Coorg Land and Revenue Regulation, 1899 and Section 80 of the Karnataka Land Revenue Act, 1964, all land is liable to the payment of land revenue (Assessment) to the State Government. This amount is due from the date of assignment and payable to the Revenue department. The lessees have paid only the assessment so far from the date of assignment.

(iv) **Timber value**: As per Rule (ii) and clause 4 in the schedule of the demise in Notification No. 14, dated the 1st February 1909 and Rule 48 and clause 4 in the schedule of the demise in Notification No. 98, dated 31st December, 1912; as per Rule 62 and clause 4 in the schedule of the demise Form-E, in the Notification No. R. F. 281 (1)- 38, dated the 15th June 1940, rule 102 the Rules made under the Coorg Land and Revenue Regulation, 1899, rule 139 of the Karnataka Forest Rules, 1969 andthe registered lease indentures/demises, "the lessee shall notify to the Forest Department in Coorg not later than the 31st October of the year concerned, the extent and situation of the land which he may clear for purposes of cultivation or otherwise, during the dry season next following and shall, before such clearance is commenced pay to Government the value of timber on that land, which said value shall be assessed by the Forest Department in accordance with the rules for the time being in force." There is no provision to pay for all the trees in the entire leased area in one installment. The lessee has to pay the timber value to the Forest department only for the trees which exist in the area as and when clearance is to be made for establishing rubber plantation. Only the owners or the occupants of lands can apply for permission to fell trees as per form I [Form of application under rule 4 (1) of the Karnataka Tree Preservation Rules, 1977]. The lessees of the government forest lands for cultivation of rubber are neither owners nor occupants of the lands. The provisions of the Karnataka Tree Preservation Act, 1976 and the Karnataka Tree Preservation Rules, 1977 are not applicable to these lessees. However, the lessees have claimed title to the land and said in their application for tree felling permission that "I do hereby agree to indemnify Government of Karnataka against any loss or damage caused on account of permission accorded to me by the Tree Officer based on erroneous or wrong

information furnished by me" and obtained permission and removed the forest trees from the leased lands without paying the timber value. The lessees have to pay for the trees removed from the said leased government forest lands.

9. **Current Lessees**: The original British lessees, on the eve of the Indian Independence, had assigned all their leasehold rights covered under the lease indentures to certain Indian companies/ individuals through assignment deedsduring 1944 and 1946. As per the covenants of the said assignment deeds, during the continuation of the said several terms, the Indian companies will pay the rents reserved by the said several indentures of lease and perform all covenants and conditions and stipulations therein contained and keep the original lessees indemnified against all actions, suits, expenses and claims on account of the non-payment of such rent or breach of non-observance of the said covenants conditions and stipulations or any of them.These companies are only the lessees and the Government is the lessor and title-holder of the lands. The Mercara Rubbers Limited, Balehonnur is in possession of an area of 1074 acres, within Kadamakal Ghat Reserved Forest and Pushpagiri Wildlife Sanctuary, in villages of Galibeedu and Kalur in Madikeri Taluk. An area of 616 acres, in Patti Ghat Reserved Forest, in Sampaje, Kallala & Urubailu Chembu villages in Madikeri Taluk is with the Cochin Malabar Estates & Industries Limited (now Thomson (India) Pvt. Ltd., Kottayam). The Nilambur Rubber Company Limited, Calicut is having an area of 708.76 acres within the Patti Ghat Reserved Forest, in Made, Monnangeri & Bettathur villages in Madikeri Taluk. An area of 1288.75 acres of Kerti Reserved Forest in Heggala village in Virajpet taluk is with the Portland Rubber Company Ltd, Bangalore and others.

10. **Cause of action**: The Deputy Conservators of Forests, Madikeri Division, Madikeri and Virajpet Division, Virajpet(DCFs), have issued several notices to the Rubber companies regarding specific violations made by the companies and finally passed orders, raising a demand towards the lease rent and timber value and stated the period of lease is 99 years from the date of original lease. The rubber companies preferred appeals to the Conservator of Forests, Kodagu Circle, Madikeri (CF) against the orders of the DCF. The CF has confirmed the DCF's orders and dismissed the appeals made by the companies. The Revenue department has initiated the process to collect the dues from the companies as arrears of land revenue. The companies have filed writ petitions in the High Court of Karnataka against the said orders. [The Cochin Malabar Estate & Industries Ltd., Cochin and Thomson Plantations (India) Pvt. Ltd.- W. P. No. 24363/ 2000;The Mercara Rubbers Ltd.- W. P. No. 29739/ 2000&W. P. No. 35509/ 2004; Portland Rubber Estates Ltd., Bangalore- W. P. No. 30020/ 2000; M/s Nilambur Rubber Co. Ltd, Calicut- W. P. No. 7943/ 2001 &W. P. No. 8187/ 2005].The High Court of Karnataka in its orders dated 16th April 2008 in the above writ petitions has held that (i) the areas leased for rubber cultivation are parcels of Government Reserved Forests; (ii) the demand raised by the DCFs regarding lease rent is referred to the Conservator of Forests to hold an enquiry and pass appropriate orders in terms of sub-section (2) of Section 109 of the Karnataka Forest Act, 1963; (iii) the demand raised by the DCFs regarding timber value is to be reconsidered by the Chief Conservator of Forests; and (iv) the State Government has to take a decision regarding the period of lease.

11. **Government decision regarding 'period of lease'**: The original period of lease was 999 years as per the 1909 and 1912 Lease Rules and it was altered as 99 years in the 1940 Lease Rules by the Chief Commissioner of Coorg, Bangalore. The Government of Karnataka has decided that the lease period in respect of the existing leases granted for rubber cultivation in Kodagu district is 99 (ninety nine) years from the date of original lease, due to the following reasons:

(i). **Statutory Rules**: The lease demises/indentures are not mere agreements between two parties but these were granted as per the specific provisions in statutory Rules. The forest land was granted, on lease, for rubber cultivation, under the provisions of the special "rules under which Reserved and Paisari Forest land may be demised for rubber cultivation" notified by the Chief Commissioner of Coorg, Bangalore. The rule (ix) in Notification No. 14 dated the 1stFebruary 1909 and the rule 52 in Notification No. 98, dated 31stDecember, 1912 read as follows:"the Government reserves to itself the right to withdraw or alter the above rules from time to time as may be necessary." The words "withdraw or alter" in the rule have to be construed in respect of the leases existing on the date of withdrawal or alteration and not regarding the prospective leases. If the intention of the Government was to apply it for prospective leases, there was no necessity to make such a rule in 1909 and 1912 Lease Rules.

